
# BANGRA 2020

## LITTLE KITE DIGITAL MAGAZINE





# EDITORIAL BOARD

## CHIEF EDITOR



SUNEETHA A
HM GHSS BANGRAMANJESHWAR

## ASSISTANT EDITORS

RAJESH KUMAR S,GREESHMA K N,PRIYA B M,MOHANA U

## STUDENT EDITORS

FATHIMATH SIDDIQUA,FATHIMA THANIYAFATHIMA,NEHA G N,HUBAID,FAMSHEED



# ಮುಖ್ಯೋಪಾಧ್ಯಾಯಿನಿಯವರ ಮಾತು

ನಮ್ಮ ವಿದ್ಯಾಸಂಸ್ಥೆಯ ಎಳೆಯ ಮನಸ್ಸುಗಳ ಸುಪ್ತ ಪ್ರತಿಭೆಯ ಅನಾವರಣವೇ ಬಂಗ್ರ 2020 ಎಂಬ ಈ ಡಿಜಿಟಲ್ ಮ್ಯಾಗಝಿನ್. ಕತೆ,ಕವನ,ಚಿತ್ರ ರಚನೆ ಹೀಗೆ ಅನೇಕ ಪ್ರಕಾರಗಳೊಂದಿಗೆ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಹೊರಗೆಡಹಿದ್ದಾರೆ.'ಹನಿ ಗೂಡಿ ಹಳ್ಳ ,ತೆನೆ ಗೂಡಿ ಬಳ್ಳ'ಎಂಬಂತೆ ಇಂದಿನ ಈ ಸಣ್ಣ ಪ್ರಯತ್ನ ಮುಂದಿನ ಅವರ ದೊಡ್ಡ ಪ್ರಯತ್ನಕ್ಕೆ ವೇದಿಕೆಯಾಗಲಿ ಎಂಬ ಹಾರೈಕೆ ನನ್ನದು. ಇಂದು ತಂತ್ರಜ್ಞಾನ ಎಲ್ಲೆಡೆಯಲ್ಲೂ ವ್ಯಾಪಿಸುತ್ತಿರುವ ಸಂಧರ್ಭದಲ್ಲಿ ನಾವು ಕಾಲಕ್ಕೆ ತಕ್ಕ ಹಾಗೆ ಬದಲಾಗಬೇಕು. ಇಂತಹ ಬದಲಾವಣೆಯ ಗುರುತು ಈ ಮ್ಯಾಗಝಿನ್.ವಿದ್ಯಾರ್ಥಿಗಳು ಸರಿಯಾದ ದಿಶೆಯಲ್ಲಿ ಪಯಣಿಸಬೇಕಾದರೆ ಗುರುಗಳ ಮಾರ್ಗದರ್ಶನ ಅತೀ ಅಗತ್ಯ. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಈ ಸಾಧನೆಗೆ ಪ್ರೇರಕರಾಗಿ ದುಡಿದ ಕೈಟ್ ಮಾಸ್ಟರ್ ಶ್ರೀ ರಾಜೇಶ್ ಹಾಗೂ ಕೈಟ್ ಮಿಸಸ್ ಶ್ರೀಮತಿ ಗ್ರೀಷ್ಮ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಹೊತ್ತಗೆ ಇನ್ನಷ್ಟು ಬೆಳೆಯಲಿ ಎಂದು ಹಾರೈಸುವ ,

ಸುನಿತಾ.ಎ.

*ಮುಖ್ಯೋಪಾಧ್ಯಾಯಿನಿ*

# INDEX

Bangra......1
ಅಭಿವೃದ್ಧಿಯ ಪಥದತ್ತ ಬಂಗ್ರಮಂಜೇಶ್ವರ ಶಾಲೆ......4
MY FIRST PLANE JOURNEY......7
NATURE......7
ಮಹಿಳೆಯರ ದೌರ್ಜನ್ಯ ಲಿಂಗ ಸಮಾನತೆ ರಾಜಕೀಯ ಪ್ರಾತಿನಿಧ್ಯ. .8
ತಾಯಿ......10
DIGITAL PAINTING......11
ಬೀದಿಯಲ್ಲಿ ಇದ್ದ ಅಪರಿಚಿತ......12
ಮುಂದುವರಿಯುತ್ತಿರುವ ಜಗತ್ತು......13
MOTHER......14
ಕಾರ್ಮೋಡಗಳ ಸುರಿಮಳೆ......15
ಪರಿಸರ ಮಾಲಿನ್ಯ......17
ಅನಾಥಯಾದ ಮಗುವ್ರೂ,ಪರಿಸರ ಮಾಲಿನ್ಯ......19
ಮುಂಜಾನೆಯ ಕೆಲಸ......20
മറക്കാനാവാത്ത പിറന്നാൾ......21
ಶ್ರೀಕಾಂತನ ಸಹಾಯ......23
സ്ത്രീകളും ആധുനികസമൂഹവും......24
പ്രകൃതി സൗന്ദര്യം......25
പിടയുന്ന മാതൃത്യം......27
സൗഹൃദം......29
കനവ്......31
മഴ......32
DIGITAL PAINTING......34
DIGITAL PAINTING......35
DIGITAL PAINTING......38
വായനാ ദിനം......40
INTERNATIONAL YOGA DAY......41
ಜನಮೈತ್ರಿ ತಿಳುವಳಿಕೆ ಶಿಬಿರ......49
ಸಸಿ ವಿತರಣೆ-2019......52
ಪ್ರತಿಭೆಗಳೊಂದಿಗೆ......60
ಓಟ......62
ವೈವಿಧ್ಯತೆಯ ಸೊಗಡು......63
ಜೀವನ......64
ಎಷ್ಟು ಸುಂದರ ಈ ಮುಪ್ಪ ?......65
RETIRED HEADMISTRESS......66
PRAVESHANOLSAVAM......67
RANIPURAM......68
A TRIP TO MANIPAL......70
LITTLE KITES 8 th Std......71
LITTLE KITES 9 th Std......72
LITTLE KITES 10 th Std......73



## ಅಭಿವೃದ್ಧಿಯ ಪಥದತ್ತ ಬಂಗ್ರಮಂಜೇಶ್ವರ ಶಾಲೆ



ಬಹುಭಾಷಾ ಸಂಗಮ ಭೂಮಿ,ದೇವರ ಸ್ವಂತ ನಾಡು,ಸಾಕ್ಷರನಾಡು ಹೀಗೆ ಹಲವು ವಿಶೇಷತೆ ಮತ್ತು ಪ್ರಸಿದ್ಧಿಯನ್ನು ಹೊಂದಿರುವ ನಾಡಾಗಿದೆ ಕಾಸರಗೋಡು ಜಿಲ್ಲೆ. ಕಾಸರಗೋಡಿನ ಅತಿ ಉತ್ತರದ ಪ್ರದೇಶವೇ ಮಂಜೇಶ್ವರ. ಕರ್ನಾಟಕದ ಗಡಿ ಭಾಗದಲ್ಲಿರುವ ಈ ಮಂಜೇಶ್ವರವು ಸಾಂಸ್ಕೃತಿಕ, ಶೈಕ್ಷಣಿಕ ,ರಾಜಕೀಯ, ಸಾಮಾಜಿಕ, ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಶೈಕ್ಷಣಿಕವಾಗಿ ಮಂಜೇಶ್ವರದಲ್ಲಿ ಹಲವಾರು ಸರಕಾರಿ ಹಾಗೂ ಅನುದಾನಿತ ವಿದ್ಯಾಸಂಸ್ಥೆಗಳಿವೆ.ಇಂತಹ ವಿದ್ಯಾಸಂಸ್ಥೆಗಳಲ್ಲಿ ಬಂಗ್ರ ಮಂಜೇಶ್ವರದ ಸರಕಾರಿ ಉನ್ನತ ಪ್ರೌಢಶಾಲೆಯು ಒಂದಾಗಿದೆ. ಈ ವಿದ್ಯಾಸಂಸ್ಥೆಯು ಮಂಜೇಶ್ವರ ಗ್ರಾಮ ಪಂಚಾಯತಿನ ಹೃದಯ ಭಾಗದಲ್ಲಿದ್ದು ಇದೀಗ ಜನಮಾನಸದಲ್ಲಿ ಒಂದು ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಂತಹ ಶಾಲೆಯಾಗಿದೆ.

ಬಂಗ್ರ ಮಂಜೇಶ್ವರ ಐತಿಹಾಸಿಕ ಸ್ಥಳವೂ ಆಗಿದೆ. ಇತಿಹಾಸದ ಪ್ರಕಾರ ಹಿಂದಿನ ಕಾಲದಲ್ಲಿ ಬಂಗರಸರು ಆಳಿದಂತಹ ಸ್ಥಳವಾಗಿದೆ.ಈ ಕಾರಣದಿಂದಲೇ ಅಂದು ಈ ಪ್ರದೇಶವನ್ನು ಬಂಗರ ಮಂಜೇಶ್ವರ ಎಂದು ಕರೆಯಲಾಗುತಿತ್ತು ಎಂದು ಹೇಳಲಾಗುತ್ತಿದೆ. ಕ್ರಮೇಣ ಈ ಪ್ರದೇಶದ ಹೆಸರು ಬಂಗ್ರ ಮಂಜೇಶ್ವರವೆಂದು ಬದಲಾಯಿತು ಎಂಬುದಾಗಿ ಕುಂಬಳೆ ಸೀಮೆಯ ಇತಿಹಾಸದಿಂದ ತಿಳಿದು ಬರುತ್ತಿದೆ.

ಮಂಜೇಶ್ವರದ ಪ್ರಧಾನ ಕೇಂದ್ರವಾದ ಹೊಸಂಗಡಿ ಪೇಟೆಯಿಂದ ಪಶ್ಚಿಮ ಭಾಗಕ್ಕೆ ಸುಮಾರು ಒಂದು ಕಿ.ಮೀ. ನಷ್ಟು ದೂರದ ಪ್ರಕೃತಿ ರಮಣೀಯ ಎತ್ತರ ಪ್ರದೇಶದಲ್ಲಿ ಬಂಗ್ರ ಮಂಜೇಶ್ವರ ಸರಕಾರಿಉನ್ನತ ಪ್ರೌಢಶಾಲೆ ಕಾರ್ಯಾಚರಿಸುತ್ತಿದೆ.ಈ ವಿದ್ಯಾಸಂಸ್ಥೆಯು 1900 ರಲ್ಲಿ 'ಬಾಸಿಲ್ ಮಿಶನ್' ಎಂಬ ಸಂಸ್ಥೆಯ ವತಿಯಿಂದ ಪ್ರಥಮವಾಗಿ

**Bangra**

ಎಲಿಮೆಂಟರಿ ಮಿಶನ್ ಸ್ಕೂಲ್ ಎಂಬ ಹೆಸರಿನಿಂದ ಒಂದರಿಂದ ನಾಲ್ಕನೆಯ ತರಗತಿಯ ತನಕ ಕನ್ನಡ ಮಾಧ್ಯಮ ಶಾಲೆಯಾಗಿ ಆರಂಭಗೊಂಡಿತು.
ಶಾಲಾ ಪರಿಸರದಲ್ಲಿ ಸುಮಾರು ನಾಲ್ಕುನೂರು ವರ್ಷಗಳಷ್ಟು ಹಳೆಯ ಇತಿಹಾಸವಿರುವ ಚತುರ್ಮುಖ ಜೈನ ಬಸದಿ ಇಲ್ಲಿನ ವಿಶೇಷತೆ. ಮಾತ್ರವಲ್ಲ ದೇವಸ್ಥಾನ, ಮಸೀದಿ, ಚರ್ಚ್ ಗಳು ಈ ಪ್ರದೇಶದಲ್ಲಿದ್ದು ಸರ್ವಧರ್ಮ ಸಮನ್ವಯಕ್ಕೆ ಸಾಕ್ಷಿಯಾಗಿದೆ.
1957 ರಲ್ಲಿ ಕೇರಳ ವಿದ್ಯಾಭ್ಯಾಸ ಇಲಾಖೆಯು ಸರಕಾರದ ಆದೇಶದಂತೆ ಬಂಗ್ರಮಂಜೇಶ್ವರ ಶಾಲೆಯನ್ನು ತನ್ನ ಸುಪರ್ದಿಗೆ ವಹಿಸಿಕೊಂಡಿತು. ಅಂದಿನಿಂದ ಮಿಶನ್ ಸ್ಕೂಲ್ ಸರಕಾರಿ ಶಾಲೆಯಾಗಿ ಅಧಿಕೃತವಾಗಿ ನೊಂದಾವಣೆಗೊಂಡಿತು.ಮಾತ್ರವಲ್ಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಾಗಿಯೂ ಭಡ್ತಿಗೊಂಡಿತು.ಕ್ರಮೇಣ 1979-80 ರ ಸಂದರ್ಭದಲ್ಲಿ ಪ್ರೌಢಶಾಲೆಯಾಗಿ ಭಡ್ತಿಗೊಂಡು ಮಂಜೇಶ್ವರದ ಪ್ರದೇಶದಲ್ಲಿಯೇ ಒಂದು ಉತ್ತಮ ಶಾಲೆಯಾಗಿ ಮುಂದೆ 1986 ರಲ್ಲಿ ಮಲೆಯಾಳ ಮಾಧ್ಯಮ ತರಗತಿಗಳು ಆರಂಭಗೊಂಡಿತು.ಬಳಿಕ 2004 ರಲ್ಲಿ ಹೈಯರ್ ಸೆಕಂಡರಿ ತರಗತಿಗಳು ಆರಂಭಗೊಂಡಿತು.
ಮುಂದಿನ ದಿನಗಳಲ್ಲಿ ಶಾಲೆಯು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಲ್ಲಿ ಹಾಗೂ ಮೂಲಭೂತವಾದ ಸೌಕರ್ಯಗಳಲ್ಲಿ ಅಭಿವೃದ್ಧಯತ್ತ ಸಾಗುತ್ತಾ ಬಂತು.ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆಯು ಹೆಚ್ಚಾಗುತ್ತಾ ಬಂತು.ಮಾತ್ರವಲ್ಲದೆ ಪ್ರತಿ ವರ್ಷವೂ ಎಸ್.ಎಸ್. ಎಲ್.ಸಿ. ಪರೀಕ್ಷೆಯ ಫಲಿತಾಂಶದಲ್ಲಿ ಗಣನೀಯ ಅಭಿವೃದ್ಧಿ ಕಂಡು ಬರುತ್ತಾ 95 ಶೇಕಡಾಕ್ಕಿಂತ ಹೆಚ್ಚಿನ ಫಲಿತಾಂಶವನ್ನು ಶಾಲೆಯು ಪಡೆಯುತಿತ್ತು. ಈಗಾಗಲೇ ಕಳೆದ ನಾಲ್ಕು ವರ್ಷಗಳಿಂದ ಮುಖ್ಯೋಪಾಧ್ಯಾಯಿನಿಯಾಗಿ ಸಾರಥ್ಯವಹಿಸಿಕೊಂಡು ಬಂದಿದ್ದ ಶ್ರೀಮತಿ.ಲೋಲಾಕ್ಷಿ ಅವರ ಸೇವಾವಧಿಯ 2019 ನೆಯ ಮಾರ್ಚ್ ಎಸ್.ಎಸ್. ಎಲ್.ಸಿ. ಪರೀಕ್ಷೆಯಲ್ಲಿನೂರು ಶೇಕಡಾ ಫಲಿತಾಂಶ ದಾಖಲಾಗಿ ಮಂಜೇಶ್ವರ ಉಪಜಿಲ್ಲೆಯಲ್ಲಿ ಹೆಸರಾಂತ ಶಾಲೆಯಾಗಿ ಮಾರ್ಪಾಟು ಹೊಂದಿದೆ.ಇದಕ್ಕಾಗಿ ಶಾಲೆಯ ಎಲ್ಲಾ ಅಧ್ಯಾಪಕ ವೃಂದದವರು ಶ್ರಮಿಸಿದ್ದಾರೆ.ಮುಖ್ಯ ಶಿಕ್ಷಕಿ ಶ್ರೀಮತಿ.ಲೋಲಾಕ್ಷಿ ನಿವೃತ್ತಿ ಹೊಂದಿದ ಬಳಿಕ ಇದೀಗ ಶಾಲೆಯ ಮುಖ್ಯ ಶಿಕ್ಷಕಿಯ ಸಾರಥ್ಯವನ್ನು ಶ್ರೀಮತಿ ಸುನೀತಾ ಅವರು ವಹಿಸಿಕೊಂಡು ಮುನ್ನಡೆಸುತಿದ್ದಾರೆ. ಮುಂದಿನ ದಿನಗಳಲ್ಲೂ ಎಸ್.ಎಸ್. ಎಲ್.ಸಿ. ಪರೀಕ್ಷೆಯಲ್ಲಿನೂರು ಶೇಕಡಾ ಫಲಿತಾಂಶ ಪಡೆಯುವ ಶತಪ್ರಯತ್ನದಲ್ಲಿ ಸಾಗುತ್ತಿದ್ದೇವೆ.

MOHANA U MANJESHWAR



# MY FIRST PLANE JOURNEY

Tak Tak Tak I walked my way
Zip Zip Zip Isat on my seat
The plane took off and I reached high
I was on the sky for one which I sighed

I could reach the cloud and scream aloud
I was up and the rest were down
All below looked so small
But the sun and moon looked like a ball

The oceans below seemed like rivulets
Soon the fairies came with chocolates
Tasty toffees ,jammy jellies
Journey I enjoyed with belt on my belly

The huge bird which carried me
Came down to land with great glee
I ran across the glossy road
And hugged my granny in a happy mood.

Madhura K.M.
Teacher



# NATURE

Nature is a calming
and peaceful word....
It comprises of trees
animals and birds....
We have learnt to call
it mother nature....
But sadly all we do
is ruthless torture....
Nature is so beautiful
It blows our mind....
You can lose yourself
at the same time....
Let's be sensible humans
and show our humanity....
Let's protect mother nature
for our community....
Nature is might...
Nature is strong...
Nature is beauty...
Nature is moody...
Nature is smart...
Nature is green...
Nature is true...
Nature is you...
Nature is me...
Nature will for be free...

FATHIMATH SIDDIQUA
IX A

**Bangra**



## ಮಹಿಳೆಯರ ದೌರ್ಜನ್ಯ ಲಿಂಗ ಸಮಾನತೆ ರಾಜಕೀಯ ಪ್ರಾತಿನಿಧ್ಯ

ಭಾರತದ ಇತಿಹಾಸದಲ್ಲಿಸ್ತ್ರೀಯರ ಸ್ಥಾನಮಾನ ಪ್ರಮುಖವಾದುದು. ಹೆಣ್ಣು ಇಲ್ಲದೆ ಪುರುಷರುಇಲ್ಲ. ಪುರುಷರು ಇಲ್ಲದೆ ಹೆಣ್ಣು ಇಲ್ಲ ಎಂಬ ಮಾತಿನಂತೆಸ್ತ್ರೀಯು ಸಮಾಜದ ಒಂದು ಜೀವಿ. ಹೆಣ್ಣಿಗೂ ಕೂಡ ಸಮಾಜದಲ್ಲಿ ಜೀವಿಸುವ ಹಕ್ಕಿದೆ. ಅವರು ಕೂಡ ಸಮಾಜದ ಒಂದು ಭಾಗ. ಪುರುಷರಾದರಾದವರಿಗೆ ಎಷ್ಟೊಂದು ಪ್ರಾಧಾನ್ಯ ನಾವು ಕೊಡುತ್ತೇವೋಅಷ್ಟೇ ಪ್ರಾಧಾನ್ಯ ನಾವುಸ್ತ್ರೀಯರಿಗೂ ಕೂಡ ಕೊಡಬೇಕಾಗಿದೆ. ಹೆಣ್ಣು ಸಮಾಜದ ಕಣ್ಣು ಎಂಬಂತೆ ಸ್ತ್ರೀಯರನ್ನು ಸಮಾಜದಲ್ಲಿ ಕೀಳಾಗಿ ಕಾಣಬಾರದು.ಸ್ತ್ರೀಯರಿಗೂ ಕೂಡ ಸ್ಥಾನ, ಮಾನ, ಗೌರವ, ಘನತೆಯಲ್ಲ ವನ್ನು ನಾವು ಸಮಾಜದಲ್ಲಿ ಒದಗಿಸಿ ಕೊಡಬೇಕಾಗಿದೆ. ಆದರೆ ಸಮಾಜದಲ್ಲಿ ಮಾಡುವುದೇನುಸ್ತ್ರೀಯರ ದೌರ್ಜನ್ಯ, ಅತ್ಯಾಚಾರ, ಬ್ರಷ್ಟಾಚಾರ, ಇವುಗಳಿಂದಲೇ ನಮ್ಮ ಸಮಾಜ ತುಂಬಿ ತುಳುಕುತ್ತಿದೆ. ಯಾವಾಗಲೂ ನೋಡಿದರೂಸ್ತ್ರೀಯರು ಭಯಭೀತರಾಗಿರುವ ಪರಿಸ್ಥಿತಿ.ಕಾರಣ ಯಾವಾಗಲೂ ಬೃಷ್ಟಾತ್ಯಾಚಾರ,ಎಂಬವುಗಳನ್ನೇ ಕೇಳುತ್ತಿರುವ ಹೆಂಗಸು ಹೇಗೆ ತಾನೆ ಭಯದಿಂದ ಹೊರಗೆ ಹೋಗಲು ಸಾಧ್ಯ?ಸಮಾಜದಲ್ಲಿ ಒಂದು ಹಣ್ಣಿಗೆ ಬೆಲೆಯೇ ಇಲ್ಲದ ಪರಿಸ್ಥಿತಿಗೆ ನಾವು ಮುಟ್ಟಿದ್ದೇವೆ.


ಹಿಂದಿನ ಕಾಲದಲ್ಲಿಸ್ತ್ರೀಯರನ್ನು ಮನೆಯಿಂದ ಹೊರಗಡೆ ಕಳಿಸುತ್ತಲೇ ಇರಲಿಲ್ಲ.ಹೆಣ್ಣಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿರಲಿಲ್ಲ.ಒಂದು ಹೆಣ್ಣನ್ನು ಮನೆಕೆಲಸದವಳ ಹಾಗೆ ಮಾಡುತ್ತಿದ್ದರು.ಒಂದು ಹೆಣ್ಣು ಮಗು ಜನಿಸಿತು ಎಂದು ತಿಳಿದ ಕೂಡಲೇ ಎಲ್ಲರ ಮನಸ್ಸು ಅಲ್ಲೋಲ ಕಲ್ಲೋಲವಾಗಿ ಬಿಡುತ್ತಿತ್ತು.ಹಣ್ಣು ಯಾವಾಗಲೂ ಸಮಾಜದಲ್ಲಿ ಕಣ್ಣೀರಿನಿಂದ ಕೈತೊಳೆಯುವ ಪರಿಸ್ಥಿತಿ.ಹೆಣ್ಣನ್ನು ಇಷ್ಟೊಂದು ಕೀಳಾಗಿ ಕಾಣುವ ಯಾವೊಂದು ಮನುಷ್ಯನೂ ಕೂಡ ತಾನು ಒಂದು ಹೆಣ್ಣಿನ ಹೊಟ್ಟೆಯಿಂದಲೇ ಜನಿಸಿ ಬಂದರುವುದು ಎಂದು ಯೋಚಿಸಲೇ ಇಲ್ಲ.ಒಂದು ಹೆಣ್ಣು ಇಲ್ಲದಿದ್ದರೆ ಇಂದು ಈ ಲೋಕದಲ್ಲಿ ಯಾವೊಂದು ಮನುಷ್ಯರೂ ಇರುತ್ತಿರಲಿಲ್ಲ.ಈ ಜಗತ್ತೇ ಇಂದು ಇರುತ್ತಿರಲಿಲ್ಲ.ಆಗಿನ ಕಾಲದಲ್ಲಿ ಹೆಣ್ಣು ತನ್ನ ಗಂಡ ಸತ್ತಾಗ ಗಂಡನ ಚಿತೆಗೆ ಹಾರಿ ಪ್ರಾಣ ಕಳೆದುಕೊಳ್ಳುವ ಪದ್ಧತಿ ಇತ್ತು.ಆದರೆ ಈಗ ಅದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.ಸರ್ಕಾರ ಈಗ ಹೆಣ್ಣಿಗೆ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಒದಗಿಸಿ ಕೊಟ್ಟಿದೆ.ಆಗಿನ ಕಾಲದಲ್ಲಿ ಹೆಣ್ಣಿಗೆ ವಿದ್ಯಾರ್ಜನೆ ಗೈಯ್ಯಲು ಅವಕಾಶವೇ ಇರಲಿಲ್ಲ.ಆದರೆ ಈಗ ಒಂದು ಹೆಣ್ಣಿಗೆ ಎಲ್ಲಾ ರೀತಿಯ ವಿದ್ಯಾರ್ಜನೆ ಗೈಯ್ಯಲು ಅವಕಾಶವಿದೆ.ಆಗಿನ ಕಾಲದಲ್ಲಿದ್ದ ಲಿಂಗ ಅಸಮಾನತೆಯನ್ನು ಸರ್ಕಾರ ಇಂದು ನಿಷೇಧಿಸಿದೆ.

ಸರ್ಕಾರ ಒಂದು ಹೆಣ್ಣಿಗೆ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟರೂ ಮಹಿಳೆಯರ ದೌರ್ಜನ್ಯ ಮಾತ್ರ ಕಡಿಮೆಯಾಗಿಲ್ಲ.ಯಾವತ್ತೂ ನೋಡಿದರೂ ಮಹಿಳೆಯರಿಗೆ ಅನ್ಯಾಯವೇ ಸಂಭವಿಸುತ್ತಿರುತ್ತದೆ.ಒಂದು ಹೆಣ್ಣಿಗೆ ಸಮಾದದಲ್ಲಿ ಬಾಳುವುದಕ್ಕೇ ಆಗುತ್ತಿಲ್ಲ.ಒಂದು ಹೆಣ್ಣಿಗೆ ರಾಜಕೀಯ ಕ್ಷೇತ್ರದಲ್ಲಿ ನಿಲ್ಲುವುದಕ್ಕೂ ಅವಕಾಶವಿದೆ.ಒಂದು ಹೆಣ್ಣಿಗೆ ಶಿಕ್ಷಣ,ಒಳ್ಳೆಯ ಹುದ್ದೆ ಎಲ್ಲವನ್ನೂ ಪಡೆಯುವಂತಹ ಸ್ವಾತಂತ್ರ್ಯವಿದೆ. ಆದರೆ ಹೆಣ್ಣಿನ ದೌರ್ಜನ್ಯ ಮಾತ್ರ ಕಡಿಮೆಯಾಗುತ್ತಿಲ್ಲ.ನಮ್ಮ ದೇಶ ಉನ್ನತವನ್ನು ಹೊಂದಬೇಕಿದ್ದರೆ ಮಹಿಳೆಯರಿಗಾಗುವ ದೌರ್ಜನ್ಯ,ಅನ್ಯಾಯ,ಅಸಮಾನತೆ ಇದೆಲ್ಲವೂ ಕೂಡ ನಿಲ್ಲಬೇಕಾಗಿದೆ.ಇದೆಲ್ಲವೂ ನಿಂತರೆ ನಮ್ಮ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುವಲ್ಲಿ ಯಶಸ್ವಿಯಾಗುತ್ತೇವೆ.ನಮ್ಮ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುವುದು ನಮ್ಮ ದೇಶದ ಜನರ ಕರ್ತವ್ಯವಾಗಿದೆ.

FATHIMATH SIDDIQUA

IX A

9 G h s s Bangramanjeshwar



# ತಾಯಿ

*ತಾಯಿ ಎಂಬ ಶಬ್ದವು ಕೇಳಲು ಎಷ್ಟು ಇಂಪಾಗಿದೆಯೋ ಅಷ್ಟಚೇ ಅವಳ ಜೀವನವು ಸುಂದರವಾಗಿದೆ.ಜಗತ್ತಿನಲ್ಲಿ ತುಂಬಾ ಕೆಟ್ಟ ಮಕ್ಕಳು ಇರಬಹುದು ಆದರೆ ಕೆಟ್ಟ ತಾಯಿ ಇರಲು ಸಾಧ್ಯವಿಲ್ಲ.ತಾಯಿಯೇ ಮೊದಲ ಗುರು ,ಹಾಗೂ ಕಣ್ಣಿಗೆ ಕಾಣುವ ಒಂದೇ ಒಂದು ದೇವರೆಂದರೆ ಅವಳು ಮಾತ್ರ.ಆಕೆ ಒಂದು ಹೆಣ್ಣಾಗಿ ತಂದೆ ತಾಯಿಯರಿಗೆ ಒಳ್ಳೆಯ ಮಗಳಾಗಿ ,ಬಂಧುಗಳಿಗೆ ಸಹೋದರಿಯಾಗಿ,ಗಂಡನಿಗೆ ಒಳ್ಳೆಯ ಹೆಂಡತಿಯಾಗಿ,ಮಕ್ಕಳಿಗೆ ಒಳ್ಳೆಯ ತಾಯಿಯಾಗಿ ಅವಳು ತನ್ನ ಎಲ್ಲಾ ಕರ್ತವ್ಯಗಳನ್ನು ಚೆನ್ನಾಗಿ ನಿಭಾಯಿಸುತ್ತಾಳೆ.ತಾಯಿಯು ಮಕ್ಕಳನ್ನು ಅತೀ ಪ್ರೀತಿಯಿಂದ ಕಾಣುತ್ತಾಳೆ.ತಾಯಿಯೇ ನಮ್ಮ ಪಾಲಿಗೆ ದೇವರು ಕೊಟ್ಟ ವರ.ತಾಯಿ ತನ್ನ ಮಕ್ಕಳಿಗೆ ಬುದ್ಧಿವಾದ ಹೇಳುವಳು.ತಪ್ಪುಗಳನ್ನು ತಿದ್ದಿ ಸರಿಯಾದ ಮಾರ್ಗದಲ್ಲಿ ನೆರವಾಗುವಳು.ತನ್ನ ನೋವು ಕಷ್ಟಗಳನ್ನು ಯಾರಿಗೂ ಹೇಳದೆ ಸದಾ ಇತರರನ್ನು ಸಂತೋಷಪಡಿಸುತ್ತಾಳೆ.ನಮ್ಮ ವಿದ್ಯಾಭ್ಯಾಸ ಹಾಗೂ ಇತರ ಕಾರ್ಯಗಳಲ್ಲಿ ಜೊತೆಗಿದ್ದು ಪ್ರೀತಿ ಹಾಗೂ ಧೈರ್ಯವನ್ನು ತುಂಬಿ ಕೈ ಹಿಡಿದು ಮುನ್ನಡೆಸುತ್ತಾಳೆ.ಆಕೆಯ ಪ್ರೀತಿಯು ಪರಿಶುದ್ಧವಾಗಿದೆ.ತಾಯಿಯ ಬೆಲೆಯನ್ನು ತಿಳಿಯದ ಎಷ್ಟೋ ಜನರು ಪಶ್ಚಾತ್ತಾಪ ಪಟ್ಟಿದ್ದಾರೆ.ಅವಳು ವಾತ್ಸಲ್ಯ ಮತ್ತು ಕರುಣಾಮಯಿಯಾಗಿದ್ದಾಳೆ.ಆಕೆ ತನ್ನ ಸುಖ ದುಃಖಗಳನ್ನು ಸಹಿಸಿ ಬಂದವಳು.ಆಕೆ ನಮಗಾಗಿ ತುಂಬಾ ಕಷ್ಟಗಳನ್ನು ಸಹಿಸುತ್ತಾಳೆ.ಆಕೆ ಇದ್ದರೆ ಜೀವನವು ತುಂಬಾ ಸುಂದರವಾಗಿರುತ್ತೆ."ತಂದೆ ಕುಟುಂಬದ ತಲೆಯಾದರೆ,ತಾಯಿ ಕುಟುಂಬದ ಹೃದಯ".*

*ಕತೀಜತುಲ್ ಕಮರುನ್ನಿಸ*
*೮ ನೇ ತರಗತಿ*

Bangra

# DIGITAL PAINTING




 G h s s Bangramanjeshwar



# ಬೀದಿಯಲ್ಲಿ ಇದ್ದ ಅಪರಿಚಿತ

ಬಾಲ್ಯದಲ್ಲೇ ಅನಾಥನಾದವನು
ಬೀದಿಯಲ್ಲಿ ಇರುವವನು
ತಂದೆ ಇಲ್ಲ ತಾಯಿ ಇಲ್ಲ
ಬಂಧುಬಳಗ ಯಾರೂ ಇಲ್ಲ
ರೈಲು ಹಳಿಯಲ್ಲಿ ಕುಳಿತು
ಚಿಂತಿಸುತ್ತಿರುವೆ ಯೇನು?
ಇಹಲೋಕ ತ್ಯಜಿಸಿದ ಮಾತೃ ಪಿತೃ
ನೆನೆದುಕೊಂಡು ಸೋತಿರುವೆ
ಬದುಕಿನ ಜೀವನದಲ್ಲಿ
ಅಲ್ಲೋಲ ಕಲ್ಲೋಲವಾಗಬಹುದು
ದುಃಖದ ಸರೋವರವು
ಅಲೆಯಂತೆ ಹರಿಯಬಹುದು
ಹಸಿವಿನಿಂದ ಒದ್ದಾಡಿ
ಹಲವು ನೆನೆಪು ಕಾಡಿ
ಇಂದು ಒದ್ದಾಡುತ್ತಿದೆ
ಸವಿಗನಸಿನ ಮನಸ್ಸು
ಬೇಸರದ ಕಾರ್ಮೋಡಗಳು
ಆವರಿಸಿದೆ ಮನದಾಳದಲ್ಲಿ
ಆಕಾಶದ ಚುಕ್ಕೆ ಚಂದ್ರಗಳು
ಬರಲಿಲ್ಲ ಯಾಕಿಲ್ಲಿ?

NEHA G N
IX A



## ಮುಂದುವರಿಯುತ್ತಿರುವ ಜಗತ್ತು

*ಎತ್ತೆತ್ತಲು ನೋಡಿರಿ ವೈಜ್ಞನಿಕ ತಂತ್ರಗಳು*
*ಎಲ್ಲೆಲ್ಲು ನೋಡಿರಿ ಪ್ಲಾಸ್ಟಿಕ್ ಗಳಹಾವಳಿಯು*
*ಎಲ್ಲವೂ ವೈಜ್ಞಾನಿಕ ಎಲ್ಲವೂ ಆಧುನಿಕ*
*ಎಲ್ಲವೂ ಆಧುನಿಕ ಎಲ್ಲವೂ ವೈಜ್ಞಾನಿಕ*

*ಎತ್ತೆತ್ತಲು ಕೇಳಿರಿ ಶಬ್ದ ಮಾಲಿನ್ಯ*
*ಎಲ್ಲೆಲ್ಲು ಉಸಿರಾಡಿರಿ ಮಲಿನ ವಾಯು*
*ಎಲ್ಲವೂ ವೈಜ್ಞಾನಿಕ ಎಲ್ಲವೂ ಆಧುನಿಕ*
*ಎಲ್ಲವೂ ಆಧುನಿಕ ಎಲ್ಲವೂ ವೈಜ್ಞಾನಿಕ*

*ಎತ್ತೆತ್ತಲು ನೋಡುರಿ ಗಗನಮುಖಿಗೆ ಎತ್ತಿರುವ ಕಟ್ಟಡಗಳು*
*ಎಲ್ಲೆಲ್ಲೂ ನೋಡಿರಿ ಪ್ಲಾಸ್ಟಿಕ್ ನಿರ್ಮಿತ ಸಾಮಾಗ್ರಿಗಳು*
*ಎಲ್ಲವೂ ವೈಜ್ಞಾನಿಕ ಎಲ್ಲವೂ ಆಧುನಿಕ*
*ಎಲ್ಲವೂ ಆಧುನಿಕ ಎಲ್ಲವೂ ವೈಜ್ಞಾನಿಕ*

*ಎಷ್ಟೆಲ್ಲಾ ಸೌಕರ್ಯವಿದ್ದರೂ ಎಷ್ಟೆಲ್ಲಾ ಪದ್ಧತಿಯಿದ್ದರೂ*
*ಎಲ್ಲಿದೆ ಮಾನವ ಗುಣ*
*ಎಲ್ಲವೂ ವೈಜ್ಞಾನಿಕ ಎಲ್ವವೂ ಆಧುನಿಕ*
*ಎಲ್ಲವೂ ಆಧುನಿಕ ಎಲ್ವವೂ ವೈಜ್ಞಾನಿಕ*

***AMAN***
***IX A***



# MOTHER

I love my mother
My mother also love me
Mother Mother my Mother
My sweet heart is my Mother
Mother Mother my Mother

I love my Mother
My Mother also love me
My sweet heart is my Mother
Mother Mother my Mother
*I love my Mother*

***ASIYAMMATH MUNEESHA***
***VB***



## ಕಾರ್ಮೋಡಗಳ ಸುರಿಮಳೆ

ಅಂದು ಶಾಲಿನಿ ಮನೆಯ ಒಳಗೆ ಏಕಾಂಗಿಯಾಗಿ ಕುಳಿತಿದ್ದಳು . ತನ್ನ ತಂದೆ ದುಡಿದು ಬರುವ ಸಮಯದ ಹೊತ್ತಾಗಿತ್ತು. ಆಗ ರಾತ್ರಿಯಾಗಿತ್ತು. ತಮ್ಮ ತಾಯಿ ಅನಾರೋಗ್ಯದಿಂದ ಮಲಗಿದ್ದರು. ಇರುವುದು ಒಬ್ಬಳೇ ತಂಗಿ ಅವಳು ಇನ್ನು ಸಣ್ಣವಳು. ಅವರ ಕುಟುಂಬಕ್ಕೆ ಅವರ ತಂದೆ ಒಬ್ಬರು ವರದಾನದಾರಿಯಾಗಿದ್ದರು.ಅವಳ ತಂದೆ ಸಂಸಾರಕ್ಕಾಗಿ ತುಂಬಾ ಕಷ್ಟಪಡುತ್ತಿದ್ದ.ಬೆಳಗ್ಗಿನ ಜಾವಕ್ಕೆ ಎದ್ದು ಕೆಲಸಕ್ಕೆ ಹೋಗುತ್ತಿದ್ದ.ಕೆಲಸ ಮುಗಿಸಿ ರಾತ್ರಿಯಲ್ಲಿ ಮನೆಗೆ ಹಿಂತಿರುಗುತ್ತಿದ್ದ.ಹೀಗೆ ತನ್ನ ತಾಯಿ ಹಾಗೂ ತಂಗಿಯ ಜೊತೆಗೆ ಶಾಲಿನಿಯು ಜೀವನ ನಡೆಸುತ್ತಿದ್ದಳು.ತಾಯಿಯ ಅಸೌಖ್ಯದಿಂದಾಗಿ ಮನೆಯ ಎಲ್ಲಾ ಕೆಲಸವನ್ನು ಹಿರಿಯವಳಾದ ಶಾಲಿನಿ ವಹಿಸುತ್ತಿದ್ದಳು.ಆಗೊಂದು ಮುಂಜಾವಿನಲ್ಲಿ ಶಾಲಿನಿ ಬೇಗ ಎದ್ದೊಡನೆ ಮುಖ ತೊಳೆದು ಮನೆಯ ಹೊರಗೆ ಬಂದು ನೋಡಿದಾಗ ಹಚ್ಚಹಸುರಿನ ಕಾಡು ವನಗಳು ಕಂಗೊಳಿಸುತ್ತಿದ್ದವು.ಹಾಗೂ ಅಲ್ಲಿ ಬಹಳ ನಿಶ್ಯಬ್ದತೆಯಿಂದ ಕೂಡಿತ್ತು.ಪ್ರಕ್ರತಿ ರಮಣೀಯವಾಗಿತ್ತು.ಹಕ್ಕಿಗಳ ಕನರವಗಳು ಕಿವಿಗೆ ಇಂಪಾಗಿತ್ತು.ಇದನ್ನೆಲ್ಲಾ ಕಂಡ ಶಾಲಿನಿಯ ಮನಸ್ಸು ಒಂತರ ಮಿಡಿಯುತ್ತಿತ್ತು.ಅವಳು ಮನೆಯಿಂದ ಹೊರಗೆ ಬರುತ್ತಾಳೆ.ಇಷ್ಟು ದಿವಸ ಆ ಕತ್ತಲೆಯ ಕೋಣೆಯಲ್ಲಿದ್ದ ಅವಳಿಗೆ ಆ ಕ್ಷಣ ತುಂಬಾ ಸೊಗಸಾಗಿತ್ತು.ಆ ವೇಳೆಯಲ್ಲಿ ಅಂದು ಸಂಜೆಯ ಸಮಯದಲ್ಲಿ ಅವಳ ತಾಯಿ ಮ್ರತಪಟ್ಟ ವಿಚಾರ ತಿಳಿಯಿತು.ಇದನ್ನು ಕೇಳಿದ ಅವಳಿಗೆ ಒಂದು ಗಳಿಗೆಯಲ್ಲಿ ಮೂಕಸ್ತಂಭಿತಳಾದಳು.ಹೀಗೆ ಆ ತಾಯಿಯ ನೆನಪುಗಳು ಕಾಲ ಕಳೆದಂತೆಯೇ ಕಣ್ಮರೆಯಾಯಿತು.ತನ್ನ ತಂಗಿಯನ್ನು ತಂದೆಯ ಜೊತೆ ಕರೆದುಕೊಂಡು ಬೇರೆ ಊರಿಗೆ ಪ್ರಯಾಣ ಬೆಳೆಸಿದಳು.ಬಸ್ಸಿನಲ್ಲಿ ಹತ್ತಿ ಕುಳಿತಾಗ ಜೋರಾಗಿ ಮಳೆ ಸುರಿಯಲು ಪರಾರಂಭಿಸಿತು.ಬಸ್ಸಿನ ಬದಿಯ ಸೀಟ್ ನಲ್ಲಿ ಕುಳಿತ ಶಾಲಿನಿಗೆ ಒಮ್ಮೆಲೇ ಅವಳ ತಾಯಿಯ ನೆನಪಾಯಿತುಯ.ನಂತರ ಅವರು ಮುಂದಕ್ಕೆಪ್ರಯಾಣವನ್ನು ಬೆಳೆಸಿದರು.ಮಳೆಯು ಒಂದೊಂದು ಹನಿಯಾಗಿ ಶಾಲಿನಿಯ ಮುಖದ ಮೇಲೆ ಬೀಳುತ್ತಿತ್ತು. ಅವಳು ಅಲ್ಲಿಯೇ ಮುಳುಗಿಹೋದಳು.ಇನ್ನು ಮುಂದಿನ ತನ್ನ ಭವಿಷ್ಯವನ್ನು ನೆನೆಯುತ್ತಾ ಅಲ್ಲೇ ಮೂಕಾಗಿಬಿಟ್ಟಳು.ಅವಳ ತಂದೆಯು ಹೆಂಡತಿ ತೀರಿಹೋದ ವಿಷಯವನ್ನು ತಿಳಿದ ಅವರು ಯಾವುದೇ ಮಾತು ಆಡಲಿಲ್ಲ.ಅವರು ಇನ್ನು ನನ್ನ ಮಗಳು ಮತ್ತು ಸಣ್ಣವಳಿಗೆ ಯಾರು ಹೊಣೆ ಎಂದು ಮೂಕವಿಸ್ಮ್ರತರಾಗಿದ್ದರು.ಅವಳ ಆ ಪ್ರಯಾನಕ್ಕೆ ತುಂಬಾ ಸಂಕಟ ಹಾಗೂ ಬೇಜಾರು,ನೋವು ಎಲ್ಲಾ ಅಡಗಿತ್ತು.ಹೀಗೆ ಅವಳ ಬದುಕಿಗೆ ಅರ್ಥವೇ ಇಲ್ಲವಿತ್ತು.ನಂತರ ಒಂದು ಗ್ರಾಮಕ್ಕೆ ತಲುಪಿ ಅಲ್ಲಿ ಅವಲ ಜೀವನವನ್ನು

ಬದಲಾಯಿಸುತ್ತಾಳೆ.ತಾನೂ ಕೆಲಸಕ್ಕೆ ಹೋಗಲು ತೀರ್ಮಾನಿಸುತ್ತಾಳೆ.ಯಾಕೆಂದರೆ ತಂದೆಗೆ ವಯಸ್ಸಾಗುತ್ತಾ ಬಂತು ಇನ್ನು ಅವರಿಂದ ಸಾಧ್ಯವಿಲ್ಲ ನಾನೇ ಹೋಗಬೇಕು ಎಂದುಮನಸ್ಸನ್ನು ಗಟ್ಟಿಮಾಡುತ್ತಾಳೆ ಕೆಲಸ್ಸಕ್ಕೆ ಬೆಳಗ್ಗೆ ಎದ್ದು ಹೋಗಲು ಶುರುಮಾಡುತ್ತಾಳೆ.ಹೀಗೆ ಅವಳು ಬೇರೆಯವರ ಮನೆಯ ಕೆಲಸಮಾಡಿ ದುಡಿದು ತಂದೆಯನ್ನು ತಂಗಿಯನ್ನು ಚೆನ್ನಾಗಿ ನೋಡುತ್ತಾಳೆ.ಮುಂದೊಂದಿನ ತಂಗಿಯನ್ನು ಶಾಲೆಗೆ ಕಳುಹಿಸುತ್ತಾಳೆ.ತನಗೆ ವಿದ್ಯಾಭ್ಯಾಸದ ಭಾಗ್ಯನಿಲ್ಲದಿದ್ದರೂ ತಂಗಿಗೆಅದು ದೊರಕಿಸಬೇಕು.ಅವಳು ವಿದ್ಯಾವಂತಳಾಗಬೇಕು.ಹಾಗೆ ಅವಳ ತಂಗಿಯನ್ನು ಚೆನ್ನಾಗಿ ಓದಿಸುತ್ತಾ ಮುಂದೆ ಬರುತ್ತಾಳೆ.ಆದರೆ ಯಾವುದೇ ಒಂದು ಕೆಟ್ಟಗಳಿಗೆಯಲ್ಲಿ ತಂದೆ ತೀರಿಹೋದರು.ಅವಳಿಗೆ ತುಂಬಾ ಸಂಕಟವಾಯಿತು.ತಾಯಿಯನ್ನು ಕಳೆದುಕೊಂಡಾಯಿತು ಇನ್ನು ತಂದೆಯನ್ನು ಕಳೆದುಕೊಳ್ಳಲು ಇಷ್ಟವಿರಲಿಲ್ಲ.ಹೀಗೆ ತನ್ನ ತಂಗಿಯ ವಿದ್ಯಾಭ್ಯಾಸವನ್ನು ನೋಡಿದಳು.ತಂಗಿ ಒಳ್ಳೆಯ ರೀತಿಯಲ್ಲಿ ಕಲಿಯುತ್ತಿದ್ದಳು.ಹೀಗೆ ಅವರು ಇಬ್ಬರೇ ಇದ್ದರು.ಮನೆಯಲ್ಲಿ ತನ್ನ ಸ್ವಂತ

ತಾಯಿಯ ಹಾಗೆ ಶಾಲಿನಿ ಅವಳ ತೆಗಿಯನ್ನು ಬಹಳ ಸ್ನೇಹ,ಪ್ರೀತಿಯಿಂದ ನೋಡುತ್ತಾಳೆ ಅವಳ ತೆಗಿಗೆ ಶಾಲಿನಿ ಅಂದರೆ ತುಂಬಾ ಪ್ರೀತಿ,ಸ್ನೇಹ ಯಾಕೆಂದರೆ ತಾಯಿ ಇಲ್ಲ ಎಂಬ ಕೊರಗು ಅವಳು ತೋರಿಸಲಲ್ಲ.ಅದಕ್ಕೆಪ್ರತಿಫಲವಾಗಿ ಅವಳ ತಂಗಿ ವಿದ್ಯಾಭ್ಯಾಸದಲ್ಲಿ ತುಂಬಾ ಮುಂದೆ ಇದ್ದಳು.ಶಾಲಿನಿಗೆ  ಒಂದು ಕನಸಿತ್ತು ತನಗೆ ಆಗದ ಕೆಲಸವನ್ನು ತನ್ನ ತಂಗಿಯ ಮೂಲಕ ನೆರವೇರಿಸುತ್ತಾಳೆ ಅಂದರೆ ಅವಳಿಗೆ ಓದಿ ಒಳ್ಳೆಯ ಒಬ್ಬ ವಿದ್ಯಾರ್ಥಿಯಾಗಬೇಕು ಎಲ್ಲರಿಗೂ ಹೆಮ್ಮೆಯಾಗಬೇಕು ಎಂಬುದು ಅವಳ ಬಹುದೊಡ್ಡ ಕನಸು ಹೀಗೆ ತನಗೆ ಬೇಕಾಗಿ ಅಲ್ಲದಿದ್ದರೂ ತಂಗಿಗೋಸ್ಕರ ದುಡಿದು ಹಣವನ್ನು ಸಂಪಾದಿಸಬೇಕು.ಅವಳಿಗೆ ಒಳ್ಳೆಯ ಗುಣಮಟ್ಟದ ವಿದ್ಯಾಭ್ಯಾಸವನ್ನು ಕೊಡಬೇಕು.ಎಂದು ಅವಳು ನಿರ್ಧಾರ ತೆಗೆದಳು.ಅವಳ ತಂಗಿ ತನ್ನ ಅಕ್ಕನ ಕಷ್ಟವನ್ನು ತಿಳಿದುಕೊಂಡು ಅಕ್ಕನಿಗೋಸ್ಕರ ಒಳ್ಳಯ ವಿದ್ಯಾರ್ಥಿಯಾಗಬೇಕೆಂಬ ಆಸೆ ಅವಳಲ್ಲಿತ್ತು.ಹೀಗೊಮ್ಮೆ ಅಕ್ಕ ಸಂಜೆಯ ವೇಳೆಯಲ್ಲಿ ಕೆಲಸಮುಗಿಸಿಕೊಂಡು ಮನೆಗೆ ತಲುಪುತ್ತಿದ್ದಳು.ಹಾಗೆ ತಂಗಿಯು ಮನೆಗೆ ತಲುಪುತ್ತಿದ್ದಳು.

ಆಗ ರಾತ್ರಿಯಾಗಿತ್ತು.ಜೋರಾಗಿ ಮಳೆ ಸುರಿಯುತ್ತಿತ್ತು.ಶಾಲಿನಿ ಕಿಟಕಿಯ ಬಾಗಿಲಿನಲ್ಲಿ ಕುಳಿತು ಹೊರಗೆ ನೋಡುತ್ತಾಳೆ.ಶಾಲಿನಿಯ ತಂಗಿಗೆ ಮಳೆಯಲ್ಲಿ ನೆನೆಯುವುದಂದರೆ ತುಂಬಾ ಇಷ್ಟ ಯಾಕೆಂದರೆ ಅದು ಅವಳಿಗೆ ತುಂಬಾ ಮನಸ್ಸಿಗೆ ಹಚ್ಚಿಕೊಂಡಿತ್ತು.ಹಾಗೆ ಅವಳ ತಂಗಿ ಮನೆಯಿಂದ ಹೊರಗೆ ಇಳಿದು ಹಂಚಿನ ತುದಿಯಿಂದ ಸಣ್ಣ ಸಣ್ಣ ನೀರಿನ ತಟಪಟ  ಶಬ್ದದೊಂದಿಗೆ ಹನಿಗಳು ಜಿನುಗುತ್ತಿದ್ದವು.ಇದನ್ನು ನೋಡಿದ ಶಾಲಿನಿಯು  ಮನೆಯ ಬಾಗಿಲಿನ ಹೊರಗಡೆಗೆ ಬಂದು ತಂಗಿಯನ್ನು ನೋಡುತ್ತಾಳೆ.ಅವಳಿಗೆ ಮನಸ್ಸಿಗೆ  ತುಂಬಾ ಬೇಸರವಾಗಿತ್ತು .ಯಾಕೆಂದರೆ ತಾಯಿಇಲ್ಲದ ಕೊರತೆ.ಆದರೆ ನಾನು ಇರುವುದರಿಂದ ತನ್ನ ತಂಗಿಗೂ ಖುಷಿಯಾದುದನ್ನು ನೋಡಿ ಅವಳ ಮುಖದಲ್ಲಿ ಎಲ್ಲಿಯೋ ಮೂಡಿದ ಒಂದು ನಗು ಬಂತು.ಅದನ್ನು ನೋಡಿದ ತಂಗಿಯ ಮನಸ್ಸು ಸಂತೋಷವಾಯಿತು.ಹೀಗೆ ಶಾಲಿನಿ ಮಳೆಗೆ ಇಳಿದು ಅವರಿಬ್ಬರೂ ಆ  ಮಳೆಯಲ್ಲಿ ಕುಣಿದಾಡುತ್ತಿದ್ದರು ಇದನ್ನು ಆಕಾಶದಲ್ಲಿ ನಕ್ಷತ್ರ ಆದ ತಂದೆ ತಾಯಿಯರು ನೋಡಿ ಖುಷಿಪಡುತ್ತಿದ್ದಾರೆ ಎಂದು ಶಾಲಿನಿ ಮನಸ್ಸಿನಲ್ಲಿ ಭಾವಿಸಿಕೊಂಡಳು.ಅಂದಿನ ಆ ರಾತ್ರಿವೇಳೆ ಮಳೆಯು ಶಾಲಿನಿಯ ಮನಸ್ಸಿನಿಂದ ಮರೆಯಲಾಗದ ದಿನವಾಗಿತ್ತು ಆ ರಾತ್ರಿವೇಳೆಯಲ್ಲಿ ಸುರಿಯುತ್ತಿದ್ದ ಮಳೆ ಅದರ ಆ ತಟಪಟ ಶಬ್ದವು ಅವಳ ಕಿವಿಗೆ ಈಗಲೂ ಇಂಪಾಗಿ  ಎಟುಕುತ್ತಿದೆ.ನಂತರ ಅವರಿಬ್ಬರೂ ಒಳ್ಳೆಯ ಜೀವನವನ್ನು ಮುಂದಿನ ಭವಿಷ್ಯದಲ್ಲಿ ಕಂಡರು...

**NEHA G N**

***IX A***



# *ಪರಿಸರ ಮಾಲಿನ್ಯ*

ಎಲ್ಲೆಲ್ಲೂ ತುಂಬಿಕೊಳ್ಳುತ್ತಿವೆ ಪ್ಲಾಸ್ಟಿಕ್ಗಳು
ಸಂಖ್ಯೆಯಲ್ಲಿ ಕನಿಷ್ಟವಾಗಿದೆ ಮರಗಿಡಗಳು
ಶಬ್ದ ಹೊರಡಿಸಿ ಬರುತ್ತಿದೆ ರೈಲುಗಳು
ಮಾಲಿನ್ಯದಿಂದ ತಲೆಯೆತ್ತಿ ನಿಂತಿದೆ ಹಳ್ಳಿಗಳು
ಸುತ್ತಲೂ ನೆಲೆಸಿವೆ ಗಗನಚುಂಬಿ ಕಟ್ಟಡಗಳು
ದಿನೇದಿನೇ ಕಡಿಮೆಯಾಗುತ್ತಿದೆ  ಸಂಕುಲಗಳು
ಕಾಡುಗಳ ನಾಶವಾಗಿ ಬೆಳೆದಿದೆ ಪಟ್ಟಣಗಳು
ನಮ್ಮಿಂದ ಕಣ್ಮರೆಯಾಗಿದೆ ಪ್ರಾಣಿ ಸಮೂಹಗಳು
ಎಲ್ಲಿ ನೋಡಿದರು ಓಡಾಡುವ ವಾಹನಗಳು
ಹೆಚ್ಚಾಗುತ್ತಿದೇ ಶಬ್ದ ಮಾಲಿನ್ಯ ಗಳು
ಬೀರುತ್ತಿದೆ ಮರಗಿಡಬಳ್ಳಿಗಳು
ತಲೆದೋರುತ್ತಿದೆ ಪರಿ ಸರ ಮಾಲಿನ್ಯಗಳು
ಅಲ್ಲಲ್ಲಿ ಕೊಳೆಯುತ್ತಾ ಬಿದ್ದಿವೆ ಪ್ರವಾದಿಗಳು
ಓಬಿಸಿ ಸಂತು ಉಂಟುಮಾಡಿದೆ ಜೀವಿಗಳು
ವಾತಾವರಣವನ್ನು ಕರೆದಿದೆ ವಿಷಾನಿಲಗಳು

Bangra

ಉಸಿರಾಡುವ ಜೀವಿಗಳಿಗೆ ಮಾರಕ ರೋಗಗಳು

ಎಲ್ಲಿ ತಿರುಗಿದರೂ ಬೆಳೆದ ನಗರೀಕರಣಗಳು

ಬಾನಿನಿಂದ ಬೀಳದೆ ನಿಂತಿದೆ ವ್ರಷ್ಟಿಗಳು

ಒಣಗಿಹೋಗಿದೆ ಇಳೆಯ ಸಂಪತ್ತುಗಳು

ಹತ್ತಿರವಾಗುತ್ತಿದೆ ಕ್ಷಾಮ ಬರಗಾಲಗಳು

ಮುಚ್ಚು ಮರೆಯಾಗುತ್ತಿದೆ ಹೊಲಗದ್ದೆಗಳು

ಎದ್ದು ಬರುತ್ತಿದೆ ಕಾಂಕ್ರೀಟ್ ರಸ್ತೆಗಳು

ಕಣ್ಣಿನಿಂದ ದೂರ ಸರಿದಿವೆ ಮೈದಾನಗಳು

ಮುಂದುವರೆದಿದೆ ವೈಜ್ಞಾನಿಕ ಕ್ಷೇತ್ರ ಗಳು

ಮುಚ್ಚಿಹೋಗಿದೆ ಊರ ಚರಂಡಿಗಳು

ಹೆಚ್ಚುತ್ತಿದೆ ಮಳೆಯಿಂದ ಪ್ರಭಾವಗಳು

*ಕಾಣದೆ ಹೋಗಿದೆ ಉಭಯ ಜೀವಿಗಳು*

***FATHIMATH SIDDIQUA***

***IX A***



## ಅನಾಥಯಾದ ಮಗುವ್ರೂ,ಪರಿಸರ ಮಾಲಿನ್ಯ

ಹುಟ್ಟಿನಿಂದಲೇ ಅಮ್ಮನ ಕಾಣದ
ಮಗುವ್ರೂ ಅಳುತ್ತಿರುವುದು ದಿನದಿನವು
ಅನ್ನವಿಲ್ಲದೆ ಹಸಿವಿನಿಂದ ನೆರಳುತ್ತಿದೆ ಮಗುವು
ಪರಿಸರವು ಮಾಲಿನ್ಯವಾಗುತ್ತದೆ ದಿನವು
ಪ್ಲಾಸ್ಟಿಕ್ ಗಳಿಂದ ಸುತ್ತಲೂ
ನಾಶವಾಗಿದೆ ಇಡೀ ಪ್ರಪಂಚವ್ರೂ
ಬದಲಾಗಿದೆ ಈ ಮನಕುಲವ್ರೂ
ಯಾರಿಗೂ ಇಲ್ಲ ಮಾನವೀಯತೆಯೂ
ಕೆಟ್ಟು ಹೋಗಿದ್ದಾರೆ ಮನುಷ್ಯರು
ಸರಿ ಆಗಲ್ಲ ಎಂದಿಗೂ
ಯಾರು ಕಾಣುವುದು ಇವೆಲ್ಲವನ್ನೂ
*ಯಾರು ಕೇಳುವುದು ಇವೆಲ್ಲವನ್ನೂ*

***AMINA AFRA***
***IX A***



## ಮುಂಜಾನೆಯ ಕೆಲಸ

ಮುಂಜಾವಿನಲ್ಲಿ ಏಳಲೇಬೇಕು
ಇದನ್ನು ಬೇಗ ಮಾಡಿಕೋ
ಮುಂಜಾವಿನಲ್ಲಿ ಹಲ್ಲನ್ನುಜ್ಜಿ
ಸ್ನಾನವ ಮರೆಯದೆ ಮಾಡಿಕೋ
ಮುಂಜಾವಿನಲ್ಲಿ ಪಾಠವ ಕಲಿತು
ಮರೆಯದ ಹಾಗೆ ನೋಡಿಕೋ
ಮುಂಜಾವಿನಲ್ಲಿ ಕೆಲಸವ ಮಾಡಿ
ತಿಂಡಿಯ ಮರೆಯದೆ ತಿಂದುಕೋ
ಮುಂಜಾವಿನಲ್ಲಿ ಸಮವಸ್ತ್ರ ಧರಿಸಿ
ಕೊಳೆಯು ಆಗದಂತೆ ನೋಡಿಕೋ
ಮುಂಜಾವಿನಲ್ಲಿ ಓದುತ ಬರೆಯುತ
*ಶಾಲೆಗೆ ಮರೆಯದೆ ಓಡಿಕೋ*

***THRISHA***
***VIA***



## മറക്കാനാവാത്ത പിറന്നാൾ

ജോൺ കണ്ണ് തുറന്നു .ഹോ എന്തൊരു ചൂട് .അവൻ എന്നിട്ട് പല്ല് തേച്ച് കുളിച്ച് പ്രാർത്ഥിച്ച് പ്രഭാത ഭക്ഷണം കഴിക്കാനായി മേശക്കരികിൽ എത്തി .അവന്റെ അമ്മയുടെ മുഖത്ത് സന്തോഷമുണ്ടായിരുന്നു എന്തെന്നില്ലാത്ത സന്തോഷം .അമ്മെ  അമ്മെ എന്താണമ്മേ അമ്മയുടെ മുഖത്ത് എന്തെന്നില്ലാത്ത സന്തോഷം .ഹോ ഇന്ന് നിന്റെ പിറന്നാളാഡാ .അവന്റെ 'അമ്മ അടുക്കളയിൽ പോയി അവന്റെ അമ്മയുണ്ടാക്കിയ കേക്ക്  എടുത്ത് കൊണ്ട് വന്നു .അവന്റെ മുമ്പിൽ കൊണ്ട് വെച്ച് .അവൻ ദേഷ്യം കൂടുതലായി വന്നു ."ഹാപ്പി  ബര്ത്ഡേ ടു യു "ജോൺ അങ്ങനെ മൂന്നാലു വട്ടം ആവർത്തിച്ചു .ഉടനെ ജോൺ പറഞ്ഞു രാവിലത്തെ പ്രഭാത ഭക്ഷണം ചോദിച്ചപ്പോൾ കേക്കാണോ കൊണ്ടുവന്നത് .ഒന്ന് നിർത്തുന്നുണ്ടോ .ഇത് ഒന്ന് മാറ്റിത്തരുമോന്ന് പറഞ്ഞ കേക്ക് ടേബിളിൽ നിന്ന് വലിച്ച് എറിഞ്ഞു എന്നിട്ട് മുകളിലേക്ക് പോയി .ഷൂസും ബാഗും എടുത്ത് പോയി .അവന്റെ 'അമ്മ തേങ്ങി തേങ്ങി കരഞ്ഞു .എന്റെ മകന്റ ഒരു പിറന്നാളെങ്കിലും ആഘോഷിച്ചിട്ടില്ല .കാരണം ഞങ്ങള്ക് വീട്ടിൽ ദരിദ്രമായിരുന്നു അവന്റെ വയസ്സിൽ ആഘോഷിക്കണമെന്നു വിചാരിച്ച് .ഇല്ല .അതും നടന്നില്ല .എന്താണാവോ അവനു പിറന്നാളെന്ന് പറയുമ്പോൾ ഒരു ഭയം പോലെ .അവൻ എങ്ങോട്ടാണോ പോയത് എന്ന പറഞ്ഞു ആ സ്ത്രീ തേങ്ങി കരഞ്ഞു .അവൻ ട്രെയിനിൽ കയറി അറിയാത്ത ഒരു സ്റ്റേഷനിൽ ഇറങ്ങി .അവൻ ഒരെത്തും പിടിയില്ലായിരുന്നു .ഞാൻ എവിടെക്കാ എങ്ങോട്ടേക്കാ പോകാൻ

തീരുമാനിച്ചത് .എന്താണെനിക്ക് സംഭവിച്ചത് .അവൻ ക്ഷീണം കാരണം സ്റ്റേഷനറിൽ ഇരുന്നു.ഒരാൾ തൊട്ട് വിളിക്കുന്നു .'അമ്മ 'അമ്മ പിച്ചക്കാരിയായിരുന്നു .ഹോ അവൻ കീശയിൽ നിന്ന് രൂപയെടുത്ത കൊടുത്തു .നിമ്മാണ് ദേവര് കാപ്പാട് .അവനു ഒന്നും മനസ്സിലായില്ല .പിറകിൽ നിന്ന് ഒരാൾ വിളിച്ചു .തിരിഞ്ഞു നോക്കിയപ്പോൾ പിറകിൽ ആരും ഇല്ല .പിറ്റേന്ന് മുമ്പിൽ ഒരാൾ നിൽക്കുന്നു .പേടിച്ചത് പോയി .ഒരു കിളവി .എന്താ, എന്ത്  വേണം ആരാ  പേടിച്ചു ചോദിച്ചു .പേടിക്കേണ്ട മോനെ ഞാൻ കി നോട്ടക്കാരിയാ .ആ ക്യിങ് നീട്ടി .അവൻ ക്യ നീട്ടി .ആ കിളവി പറഞ്ഞു .അവനുണ്ടായ ഭാഗ്യവും ദുരന്തവും പറഞ്ഞു അവനത് കേട്ട് നിന്ന്

.അവൻ കണ്ണടച്ചു തുറക്കുമ്പോൾ കിളവി പോയി .അത് ഒരു ദുര്മന്ത്രമായിരുന്നു .അവനത് ആലോചിച്ചതേയില്ല .എന്നിട്ടു അവൻ മുമ്പിലേക്ക് നീങ്ങി .എന്തൊരുന്ന അച്ചടക്കം .പെട്ടെന്ന് ഒരു നിലവിളി .എല്ലാവരും ഓടുന്നു .ആരോട് ചോദിച്ചിട്ടും ആരും ഒന്നും പറയുന്നില്ല ജോനും അവരുടെ പിന്നാലെ ഓടി .അവിടെ കുടിലിൽ ഒരു പെൺകുട്ടി കരയുന്നു .അപ്പ  അപ്പ എന്നു വിളിച്ചു പറയുന്നതാവും .എല്ലാവരും സമാധാനിപ്പിച്ചു .ഞാനൊരാളെ വിളിച്ചു മലയാളിയാണെന്ന്  തോന്നി .എന്താണ് സംഭവിച്ചദ് ആ കുട്ടി പാവപ്പെട്ട ഒരു കുടുംബ ജീവിതം ആ കുട്ടിയുടെ 'അമ്മ മരണപ്പെട്ടുപോയി അവളുടെ ആശ്രയം അവളുടെ അപ്പനായിരുന്നു എപ്പോ അതും പോയി പാവം ആരും ഇല്ല അവൾക്കു കൂട്ടായി ഒരു നീജ സ്ത്രീ ഉണ്ട് ആമിയാണ് ആമിയോ അദേ എന്താ സഹോദര എയി ഒന്നുമില്ല എന്നു ശെരി ആ ഓക്കേ അവനു ആമിയെ കാണണം കണ്ടു അവളുന്നു ഡോക്ടറായിരുന്ന അവനിടെ അച്ഛനെ തട്ടിയെടുത്തവൾ അവന്ടെ പിറന്നാൾ ദിവസം തന്നെ അച്ഛനെ കൊണ്ട് അന്നാണ് പിറന്നാൾ എന്ന് പറയുമ്പോൾ ദേഷ്യം അവൾ മന്ത്ര വധിയാണ് അവന്ടെ അമ്മയും അച്ഛനും കരബകടത്തിൽ പെട്ടു അന്നെന്റെ പിറന്നാളാണ് ഭാഗ്യത്തിന് അന്ന് ഞാൻ പോയി ഞാൻ അമ്മായിയുടെ വീട്ടിൽ ഉണ്ടായിരുന്നു ദരിദ്രമല്ലേ ഒരു നാലിൽ ബിരിയാണി വെച്ചത് കൊണ്ടാണ് ഞാൻ പോവാതെ ഇരുന്നതു പിന്നെ അറിയേണ്ടതാണ് അച്ഛൻ മരണപ്പെട്ടു അമ്മായിക്ക് ബോധം ഇല്ലായിരുന്നു അത് കൊണ്ട് അമ്മായിക്ക് ഇതൊന്നും അറിയില്ലായിരുന്നു ആമിയാണ് മുഖ്യ ഡോക്ടർ അവൾ ജീവനാണ് ജീവനുണ്ട് എന്ന് പറഞ്ഞു പോസ്റ്റ് മാറ്റ് ചെയ്തു കിഡ്നിയും അങ്ങനെ വിലപിടിപ്പുള്ള വസ്തുക്കൾ എടുത്തു എന്നിട്ടു ശവപ്പെട്ടിയിലാക്കി ഞങ്ങളുടെ മുന്നിൽ കൊണ്ട് വന്നു എന്നിട്ടു പറഞ്ഞു ഇത് കണ്ണീരായി മരണമാണ് എന്ന് പറഞ്ഞു പോയി അവളുടെ കൈയബദ്ധം കൊണ്ടാണ് എന്റെ അച്ഛൻ മരണപ്പെട്ടത് പാവം 'അമ്മ അമ്മയ്ക്കു ഒന്നും അറിയില്ല .............'അമ്മ അറിഞ്ഞാൽ ...

***NABEESATH THAZIRA***
***VIIIC***



## ಶ್ರೀಕಾಂತನ ಸಹಾಯ

ಒಂದಾನೊಂದು ಕಾಲದಲ್ಲಿ ಶ್ರೀಕಾಂತ ಎಂಬ ವ್ಯಕ್ತಿ ಇದ್ದನು.ಅವನಿಗೆ ಮಕ್ಕಳು ಇರಲಿಲ್ಲ.ಅವನು ಆಶ್ರಮದಲ್ಲಿರುವ ಅನಾಥ ಮಕ್ಕಳನ್ನು ನೋಡಿಕೊಳ್ಳುತ್ತಿದ್ದ.ಅವನು ಒಂದು ದಿನ ಬೇರೆ ಊರಿನಲ್ಲಿರುವ ಆಶ್ರಮಕ್ಕೆ ಹೋಗಬೇಕೆಂದು ತೀರ್ಮಾನಿಸಿದನು.ಶ್ರೀಕಾಂತನು ಆ ಊರನ್ನು ಪ್ರವೇಶಿಸಿದಾಗ ಒಂದು ಮಗು ಬಂದು ಅವನ ಹತ್ತಿರ ಕುಳಿತುಕೊಂಡು ಅಳತೊಡಗಿತು.ಯಾಕೆಂದರೆ ಆ ಮಗುವಿಗೆ ತಂದೆ ತಾಯಿ ಯಾರೂ ಇಲ್ಲ.ಶ್ರೀಕಾಂತನಿಗೆ ಬಂದ ದುಃಖವನ್ನು ತಡೆಯಲಾಗಲಿಲ್ಲ.ಅವನು ಆಶ್ರಮಕ್ಕೆ ಹೋಗದೆ ಮಗುವನ್ನು ಕರೆದುಕೊಂಡು ತನ್ನ ಮಗನಾಗೆ ನೋಡಿಕೊಂಡನು.ಅವನಿಗೆ ಬೇಕಾದದ್ದನ್ನೆಲ್ಲಾ ಶ್ರೀಕಾಂತನು ತೆಗೆದು ಕೊಡುತ್ತಿದ್ದನು.ಮತ್ತು ಆ ಮಗುವಿಗೆ ವಿದ್ಯಾಭ್ಯಾಸವನ್ನು ಕಲಿಯಲಿಕ್ಕೆ ಶಾಲೆಗೆ ಸೇರಿಸಿದನು.ಆ ಮಗು ಅವನ ಕ್ಲಾಸಿನಲ್ಲಿ ಮೊದಲನೆಯ ಸ್ಥಾನ ಪಡೆದಿದ್ದನು.ಶ್ರಾಕಾಂತನಿಗೆ ತುಂಬಾ ಖುಷಿಯಾಯಿತು.ಅದಕ್ಕಾಗಿ ಅವನು ನೋಡಿಕೊಳ್ಳುತ್ತಿದ್ದ ಅನಾಥ ಆಶ್ರಮದ ಮಕ್ಕಳಿಗೆ ಸಿಹಿ ತಿಂಡಿಗಳನ್ನು ನೀಡಿದನು.ಶ್ರೀಕಾಂತನು ದೊಡ್ಡ ಶ್ರೀಮಂತನಾಗಿದ್ದನು.ಆದರೆ ಅವನಿಗೆ ನಾನು ಶ್ರೀಮಂತ ಎಂಬ ಜಂಭ ಇರಲಿಲ್ಲ.ಶ್ರೀಕಾಂತನು ಬಡವರಿಗೆ ಒಂದಷ್ಟು ಹಣವನ್ನು ನೀಡುತ್ತಿದ್ದನು.ಶ್ರೀಕಾಂತ ಸಾಕಿದ ಹುಡುಗನ ಹೆಸರು ಅನಿಲ.ಅನಿಲನು ಎಸ್.ಎಸ್.ಎಲ್.ಸಿ ಯನ್ನು ಮುಗಿಸಿ ಕಾಲೇಜಿಗೆ ಹೋಗುತ್ತಿದ್ದನು.ಕಾಲೇಜಿಗೆ ರಜೆ ಸಿಕ್ಕಿದ ಸಮಯದಲ್ಲಿ ಆಶ್ರಮದ ಅನಾಥ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಹೇಳಿಕೊಡುತ್ತಿದ್ದನು.ಆಶ್ರಮದಲ್ಲಿರುವ ಆನಾಥ ಮಕ್ಕಳನ್ನು ನೋಡಿಕೊಳ್ಳುವವರಿಗೆ ಒಂದಿಷ್ಟು ಹಣವನ್ನು ಕೊಟ್ಟನು.ಅವರಿಗೆ ಬಹಳ ಖುಷಿಯಾಯಿತು.ಶ್ರೀಕಾಂತನು ಅನಾಥ ಆಶ್ರಮದಲ್ಲಿರುವವರಿಗೆ ವಾರಾನ್ನ ಊಟವನ್ನು ನೀಡುತ್ತಿದ್ದನು.ಆಶ್ರಮದಲ್ಲಿರುವವರಿಗೆ ಏನು ಬೇಕೋ ಅದೆಲ್ಲವನ್ನು ಶ್ರೀಕಾಂತನು ತೆಗೆದುಕೊಡುತ್ತಿದ್ದನು.ಅನಿಲನಿಗೆ ಮದುವೆಯಾಗುವ ವಯಸ್ಸಾಯಿತು.ಶ್ರೀಕಾಂತನು ಅನಿಲನ ಮದುವೆಯನ್ನು ತುಂಬಾ ಒಳ್ಳೆಯ ರೀತಿಯಲ್ಲಿ ಮಾಡಿ ಮುಗಿಸಿದನು.ಮದುವೆಯಾದ ನಂತರ ಶ್ರೀಕಾಂತನು ಮತ್ತು ಅನಿಲ ಹಾಗೂ ಅವನ ಹೆಂಡತಿ ಸುತ್ತಾಡಲಿಕ್ಕೆ ಆಗ್ರದಲ್ಲಿರುವ ತಾಜ್ ಮಹಲ್ ಗೆ ಹೋದರು.ಅಲ್ಲಿಯೇ ತುಂಬಾ ದಿನ ಉಳಿದರು.ಅಲ್ಲಿಯೇ ಅನಿಲನಿಗೆ ಒಂದು ಮಗು ಜನಿಸಿತು.ಅನಿಲನಿಗೆ ತಡೆಯಲಾಗದ ಖುಷಿ ಉಂಟಾಯಿತು.ಅಲ್ಲಿಯೇ ಶ್ರೀಕಾಂತನು ತನ್ನ ಮೊಮ್ಮಗನಿಗೆ ಚಿನ್ನವನ್ನು ಕೊಟ್ಟನು.ಶ್ರೀಕಾಂತನು ತನ್ನ ಮೊಮ್ಮಗನಿಗೆ ಅರುಣ ಎಂಬ ಹೆಸರಿಟ್ಟನು.ಶ್ರೀಕಾಂತನು ಅರುಣನಿಗೆ ಬೇಕಾದ ವಸ್ತುಗಳನ್ನು ತೆಗೆದುಕೊಟ್ಟನು.

ಶ್ರೀಕಾಂತ,ಅನಿಲ,ಅರುಣ ಹಾಗೂ ಅನಿಲನ ಹೆಂಡತಿ ಇವರು ನಾಲ್ವರು ಮನೆಗೆ ಹಿಂತಿರುಗಿದರು.ಅರುಣನು ಒಬ್ಬ *ಬುದ್ದಿವಂತ ಹುಡುಗನಾಗಿ ಬೆಳೆದನು.ಎಲ್ಲರೂ ಖುಷಿಯಿಂದ ಜೀವನ ಮುಂದುವರಿಸಿದರು...*

***SHAMNA***
***VI A***



## സ്ത്രീകളും ആധുനികസമൂഹവും

ഇന്ന് നമ്മുടെ സമൂഹത്തിൽ സ്ത്രീകൾ ഒരുപാട് പ്രശ്നങ്ങൾ നേരിടുന്നു. കൂടുതലായി നേരിടുന്നത് നമ്മുടെ സമൂഹത്തിൽ സാധാരണ സ്ത്രീകളിലാണ് .എന്നാൽ ഈ ആധുനിക സമൂഹത്തിൽ സ്ത്രീകൾക്ക് വേണ്ടി എല്ലാ സൗകര്യങ്ങളുണ്ട് പക്ഷെ എന്നും ഈ സമൂഹത്തിൽ ചില സ്ത്രീകളെ ജോലിക്ക് വിടാതെ അടുക്കളയിൽ ചുരുട്ടി കൂടി ജീവിക്കുന്ന ഒരുപാട്ട് സ്ത്രീകൾ എന്ന ഈ സമൂഹത്തിൽ ഉണ്ട സ്ത്രീധനം കൊടുക്കാത്ത നിന്ടെ പേരിലും മറ്റു പല പ്രശ്നങ്ങളിലും സ്ത്രീകൾ ചൂഷണം ചെയ്യപ്പെടാൻടി വരുന്നധ് കാണാം സ്ത്രീഗക്കും പുരുഷന്മാരെ പോലുള്ള എല്ലാ അവഗശങ്ങൾ ഉണ്ട്ആ അവകാശത്തെ പാലസ്ത്രീകളും എന്ന്തള്ളിക്കളയുന്നു എന്നിമിക്കയാ സ്ത്രീകളായുംകാണണം മാതാപിതാക്കളെ തള്ളിപ്പറങ്ങ് വീടിനെ ഉപേക്ഷിച്ച നട്ട് വിട്ട് സ്നേഹിച്ച പുരുഷനോടൊപ്പം ഒളിച്ചോടുന്നദ് നമ്മൾ ഒരുപാട് കൺടിട്ടുണട്ട് അവസാനം കോടതി മുറിയിൽ എനിക്ക് മാതാപിതാക്കളെ വണ്ടടാ എനിക്ക് നാൻ സ്നേഹിച്ച പുരുഷനാ മതി ഈ ഒരു ഒറ്റ വക്കിൽ അവള് സ്നേഹിച്ച പുരുഷനോടൊപ്പം പോയി കല്യാണം കഴിച്ച ജീവിക്കും പിന്നെ ആ പുരുഷൻ അവളെ കൊന്ന് അയാളുടെ പാട്ടിന്ന് പോകും ഏതൊക്കെത്തന്നെയാണ് ഇന്ന് ഈ സമൂഹത്തിൽ നടക്കുന്നാദ് അനുകളും ചതിയിൽപ്പെട്ട വഞ്ചിതരാകുന്ന സ്ത്രീകളും ഉണ്ട ഇതിനൊക്കെ നേരിടാൻ സ്ത്രീകള സംരക്ഷിക്കാനുള്ള വകുപ്പുകൾ എന്ന ഈ ആധുനിക സമൂഹത്തിൽ ഇന്ന് ഈ ആധുനിക സമൂഹത്തിൽ മുകളിൽ പരന്ന കാര്യങ്ങളൊക്കെ ഏതുറക്കുന്നദുമായ സ്ത്രീ സംരക്ഷണത്തിനുവേൺടി പോരാടുന്നടുമായ സ്ത്രീകളും ഇന്നും ഈ സമൂഹത്തിലുമുണ്ട് ഇടുപോലെയുള്ള സ്ത്രീകളെകുറിച്ചുള്ളകാര്യങ്ങളും ഒക്കെ ഇവർ ബോധവത്കരിക്കും ഈ ആധുനിക സമൂഹത്തിൽ സ്ത്രീകൾക്ക് വാണ്ടഡി എല്ലാ സൗകര്യവും ഈക്കാലത് ഉണ്ട അല്ലാത്ത പാണ്ഡടുള്ളതുപോലെ ചെറിയ വയസ്സിൽ കല്യാണം കഴിപ്പിച്ചിട്ട് അടുക്കളയിൽ ചോറൂട്ടി കൂടി കിടക്കാനുള്ള ജീവിതമല്ല എന്നുള്ളത് സ്ത്രീകൾ ഇതിനെ പ്രയോജനപ്പെടുത്തി സാധാരണ സ്ത്രീകൾക്ക് വിദ്യാഭ്യാസം ലഭ്യമാക്കി കൊടുത്ത അവരെ ഈ അബനിക സമൂഹത്തിൽ ഭാഗമായി മാറ്റുക

***FATHIMATH SAFEERA***
***VIIIC***

**Bangra**



## പ്രകൃതി സൗന്ദര്യം

പ്രകൃതി സൗന്ദര്യം
എന്തു സുന്ദരമാണെന്റെ പ്രകൃതി
ഏഴു നിറമാർന്ന മഴവില്ലും
പച്ച പുതപ്പിട്ടു പുൽതൊടിയും
നക്ഷത്രം സൂര്യനും അമ്പിളിയും
ചേർന്ന് പ്രകൃതി സുന്ദരമാക്കിയ നീലാകാശം
എണ്ണമയായ  പ്രകൃതിയെ
എൻ അമ്മയെന്നെ സ്നേഹിച്ചത്
പോലെ എൻ പ്രകൃതിയും മക്കളെ
സ്നേഹിച്ചു
' അമ്മ കഷ്ടപെട്ടത് പോലെ
എൻ പ്രകൃതീയും കഷ്ടപ്പെട്ടു
അഴകാർന്ന പ്രകൃതിയെ
എൻ നിറമാർന്ന പ്രകൃതിയെ
നാളികേരവും പൂന്തോട്ടവും
അതിലിരിക്കുന്ന പൂമ്പാറ്റയും
അഴകാണെന്റെ പ്രകൃതി
സുന്ദരിയാണെന്റെ പ്രകൃതി
പ്രകൃതി
അച്ചടിച്ചത് പോലെ
ഭൂമിയും ഉൾക്കൊണ്ട്
ഇതെല്ലം ഒത്തുവെച്ചൊരാൾ
ഭൂമിയാണ്
എൻ പ്രകൃതിയാണ് അമ്മെ
ആ സൗന്ദര്യം കണ്ടാൽ മയങ്ങി പോകുമാരായാലും

NABEESATH THAZIRA
VIIIC

 G h s s Bangramanjeshwar



നമ്മുടെ മാതാപിതാക്കളെ സ്നേഹിക്കാം

ചെറുപ്രായത്തിൽ നമ്മുടെ കൈ പിടിച്ച് നടത്തി .നന്ദിയോടെ അവർക്ക് നടക്കാൻ വയ്യാതാവുമ്പോൾ അവരുടെ കൈ പിടിക്കാം

ചെറു പ്രായത്തിൽ അവർ ഭക്ഷണം നമുക്ക് കോരി തന്നു .നന്ദിയോടെ അവർക്ക് ഇഷ്ടമുള്ള ഭക്ഷണം കൊടുക്കാം

ചെറുപ്രായത്തിൽ അവർ നമ്മളെ എടുത്തു നടന്നു .നന്ദിയോടെ അവരെ എടുത്തു കൊണ്ട് ആശുപത്രിയിലേക്ക് പോകാം

ചെറുപ്പത്തിൽ അവർ നമുക്ക് വേണ്ടി ഉറക്കമൊഴിഞ്ഞു . നന്ദിയോടെ അവർക്കു വേണ്ടി ഉറക്കമൊഴിയും

ചെറുപ്പത്തിൽ അവർ നമ്മുടെ തെറ്റുകൾ ക്ഷമിച്ചു നന്ദിയോടെ അവരുടെ അറിവില്ലായ്മയും നമുക്ക് ക്ഷമിക്കാം

ഓര്മിക്കുകക

ജീവിച്ചിരിക്കുമ്പോൾ ഒരു പൂവ് നൽകുന്നതാണ് മരിച്ചു കഴിഞ്ഞാൽ ഒരു പൂച്ചെണ്ട് നൽകുന്നതിനേക്കാൾ നല്ലത്

***Biji M***
***Teacher***

**Bangra**



## പിടയുന്ന മാതൃത്യം

പിടയുന്ന നാം ഈ  ജീവിതപാതയിൽ

അവിടെവെച്ചെങ്കിലും കണ്ടിട്ടുമ്ല

ഇല്ല നീ കാണകയില്ലെന്ന് ഗദ്ഗദംപോകട്ടെജാൻ

ഹൃദയം തകരുന്ന നമ്പരാമായ

എണ് നെഞ്ചിൽ ചേർന്ന നീ പാൽനുകർന്നിടവേ

ആ കുഞ്ഞു മിറികളാണ് നീർകുന്നിലെ

ഏണില്ലാണിക്കേണ്ടേ പൈതലിനെകുപ്പാണ്

ഒരുതുള്ളിമതൃത്വമെന്ടെ മാരിൽ

അറുതി കൊടും പാപം ചെയുമീ കായ്കളും

അപരാതിയമീന് മാതൃപ്

ഈ കടത്തിണ്ണയിൽ പൂന്നുമാനെ

നിന്നെ ഉപീക്ഷിച്ച പോകട്ടെജാൻ

എൻഡി ഇ പ്രാണനും ഹൃത്തും നിനക്കൊപ്പം

മെപ്പൊഴും ക്ഷുത്തിനായ് വച്ചിടാംഞ്ഞാണ്

ദാരയായ വീഴുന്ന കണ്ണനീർത്തുള്ളികൾ

കുഞ്ഞൻ കവിളിൽ പാതികേടുന്ന

ഇല്ലേണ്ടെ മുൻപിലായി വരികൾ മറ്റേതുമേ

ഈ കൂട്ടം ക്രൂരത നീപൊരൊക്ക്

കാലങ്ങൾ മായ്ച്ചിടും മമ്മുറിവുകൾ ക്ഷുപ്പമായ്

യാഥാർത്യമെന്തെന്ന് നീയറിയും

നിറമുള്ളസ്വപ്പ്നവും എന്റെ കാവ് മരവും

ചീന്ദിറിഞ്ഞ നാരദമാരും

27 G h s s Bangramanjeshwar

**Bangra**

ഉദരത്തിൽ നിന്നെയും മുൾകിരീടമായ
എണ്ണമദേയമാവർക്കുറിച്ച

ശ്വിരിണീ എന്നവർ എന്നെവിളിച്ചുതു
ഏളുപാടുന്നിതാ ഈ സമൂഹം
അഭിസാരിക്കാതെൻ കുഞ്ഞെന്ന പീരിൽനീ
വളർന്നിടാലെന്ന് ജനറച്ച

അനാഥത്വമെന്നവാക്കിന്നതിലേറെ
അഭിമണ്ഡമെന്തെന്ന ഞാനറച്ച
ഗഗനത്തിൽ താരകക്കൂട്ടാനകക്കിടയിൽ
നിന്നെയും നോകിയിത്തനീര്ക്കും

***Biji M***
***TEACHER***

## സൗഹൃദം

ഒരിടത്ത് ഒരു വീട്ടിൽ അച്ഛനും അമ്മയും ഒരു സഹോദരനും സഹോദരിയും താമസിച്ചിരുന്നു.ചേട്ടൻ മനുവും അനുജത്തി മീനുവും.മനു നാലാം ക്ളാസിലും മീനു മൂന്നിലും പഠിക്കുന്നു.രണ്ടുപേരും പഠിക്കാൻ മിടുക്കരായിരുന്നു.അവർ ഒരു ദിവസം സ്കൂൾ വിട്ട് വരുമ്പോൾ "ചേട്ടാ അതാ ഒരു കുഞ്ഞി പക്ഷി”.മീനു പറഞ്ഞു."എവിടെ"മനു ചോദിച്ചു.മീനു കൈ ചൂണ്ടി."ദാ ആ മരക്കൊമ്പിൽ"."അയ്യോ മീനു,അത് ഇപ്പോ വീഴും നമുക്ക് അതിനെ രക്ഷിക്കണം"ചേട്ടനപറഞ്ഞു .അതെ ചേട്ടൻ പറഞ്ഞത് ശരിയാണ് .നല്ല കുട്ട് നമുക്ക് അതിനെ രക്ഷിക്കാം .അവർ ഇരുവരും ഓടിച്ചെന്നു അതിനെ രക്ഷിച്ചു .അപ്പോൾ ചേട്ടൻ പറഞ്ഞു .മീനു നോക്ക് പാവം അതിന്റെ കാലിൽ നിന്ന് ചോര വരുന്നു ചേട്ടാ നമുക്ക് ഇതിനെ വ്വെറ്റിൽ കൊണ്ടുപോയി പരിചരിക്കാം .മീനു പറഞ്ഞു .

അവരുടെ വീട് അതിനടുത്താണ് .അവർ അതിനെയും കൊണ്ട് ഓടി .വീട്ടിൽ ഒരു കൂടി നിർമിച്ചു .അവർ അതിനെ പരിചരിച്ചു .പാലും പഴവും നൽകി .മുറിവിൽ മരുന്ന് വെച്ചു .രണ്ടാഴ്ച അവർ അതിനെ നന്നായി നോക്കി പിറ്റേന്ന് ചെന്ന് നോക്കിയപ്പോൾ അവർ ഞെട്ടി പ്പോയി .അത് കൂട്ടിൽ പറക്കാൻ ശ്രമിക്കുന്നു .മനു ഓടി ചെന്ന് അതിന്റെ കാലിലെ കെട്ടഴിച്ചു .പക്ഷി മുറി മുഴുവൻ പാറിക്കളിച്ചു .മീനു അതിനെ പിടിച്ച പുറത്തേക്ക് കൊണ്ടുപോയി .അന്ന് അത് വീഴാൻ പോയ മരത്തിൽ അത് പറന്നുപോയി .അവിടെ മറ്റൊരു പക്ഷി ഉണ്ടായിരുന്നു .അവർ ഇരുവരും പറന്നുകളിച്ചു .എന്നിട്ട് കൂട്ടിലിരുന്നു .അപ്പോൾ മീനു പറഞ്ഞു ചേട്ടാ  അവിടെ ഒരു മുട്ട

.എവിടെ മീനു ചേട്ടൻ ചോദിച്ചു .അവൾ കൂട്ടിലേക്ക് കു ചൂണ്ടി .അത് അവരുടെ കുഞ്ഞാവ ഉള്ള മുട്ടയായിരിക്കും .

രണ്ടു ദിവസത്തിന് ശേഷം അവർ ആ കൂട്ടിനടുത്തേക് എത്തി .അപ്പോഴതാ ആ കൂട്ടിൽ ഒരു നീല  പക്ഷി കുഞ്ഞിരിക്കുന്നു ചേട്ടനും അനുജത്തിയും ഇപ്പോഴും അവർക്ക് ഭക്ഷണം നൽകും .കുഞ്ഞു നീല പക്ഷിയും മീനുവും നല്ല സുഹൃത്തുക്കൾ ആയി.

Fathimath sahana
VII B

## കനവ്

മൂവന്തി തോപ്പിലുറങ്ങും തേന്മാവിൻ കൊമ്പത്ത്
കാറ്റായ് നാം പരന്നതല്ലേ
മഴവില്ലിൻ ഊരാത്ത
അകലെ ആകാശത്തോളം
നീന്തി നീന്തി
ഇന്നിവിടെ വാനംനീളെ
യടിപ്പാടി
കനവിന്റെ തോപ്പും പേറി തീരമേ നീയാടി
മുകിലിൻ മറവിൽ പ്രണയം ചീറ്റിപ്പോയി
എന്നാലും
മറയാതിവിടെ  സൗഹൃതമായ് നാം
കാലിയാടുന്ന പ്രിയമായു

sekina
IX C

# മഴ

മഴ മഴ മഴ മഴ പെയ്തു
കുന്നിൻ ചെരിവുകളിൽ മഴ പെയ്തു
കുളവും കായലും മഴ പെയ്തു
കുളിക്കാൻമഴ യിൽ രസമുണ്ട് .
ഹ എന്ത് രസം

മഴ മഴ മഴ പെയ്തു
കിനറം തോഡും വെള്ളം നിറഞ്ഞു
കുട്ടികളെല്ലാം സന്തോഷിച്ചു കളിച്ചു

മഴ മഴ മഴ പെയ്തു
കാറ്റും വന്നു മഴയും വന്നു
പക്ഷികൾ മഞ്ഞു കൊണ്ട്
ചാടി വിറച്ചു പറന്നു പോയി
എല്ലാവരും തണുത്തു പോയി

മഴ മഴ മഴ പെയ്തു
ചെടികളെല്ലാം വളർന്നു
താവളകളെല്ല്ലാം ചാടി തുടങ്ങി

മഴ മഴ മഴ പെയ്തു
ഇടിയും മിന്നും വന്നു എല്ലാവരും പേടിച്ചു
കടലിൽ പുഴയിൽ വെള്ളം നിറഞ്ഞു
കുട്ടികളെല്ലാം സ്കൂളിൽ
പോകുമ്പോൾ മഴ പെയ്തു കുട്ടികൾ മഴ നനയാതെ കുട ചൂടി

മഴ മഴ മഴ പെയ്തു

കുന്നിൻ ചേരുവകളിൽ മഴ പെയ്തു


മഴ മഴ മഴ പെയ്തു
ഓടിന് മേലെ മഴ പെയ്തു
റോഡുകളെല്ലാം കുഴിയായി
മഴ മഴ മഴ പെയ്തു

fathimath saida
6 th B

# DIGITAL PAINTING



# DIGITAL PAINTING



# DIGITAL PAINTING



**Bangra**



37 G h s s Bangramanjeshwar

**വായനാ ദിനം**







38 G h s s Bangramanjeshwar

# INTERNATIONAL YOGA DAY



**Bangra**


Bhadra A.S
അളവുകൾ
1 കിലോഗ്രാം
500 ഗ്രാം
100 ഗ്രാം
200 ഗ്രാം
50 ഗ്രാം
20 ഗ്രാം
പ്രൊട്രാക്ടർ
സ്കെയിൽ
സെറ്റ് സ്ക്വയർ
കോമ്പസ്
സെറ്റ് സ്ക്വയർ
ഡിവൈഡർ
By

**Bangra**




**Bangra**

## ಜನಮೈತ್ರಿ ತಿಳುವಳಿಕೆ ಶಿಬಿರ






**Bangra**



Bangra


## ಸಸಿ ವಿತರಣೆ-2019

***ಜೂನ್ 5 ಪರಿಸರ ದಿನದಂದು ಎಲ್ಲಾ ಮಕ್ಕಳಿಗೆ ಗಿಡ ವಿತರಣೆ ಮಾಡಲಾಯಿತು.***






**Bangra**



# *LK EXPERT CLASS*



**Bangra**


ദ്രാവക അളവുകൾ
5 Litre
2 Litre
5 ലിറ്റർ
2 ലിറ്റർ
1 ലിറ്റർ
1 Litre
500 ML
100 ML
200
1 ലിറ്റർ
500 മില്ലി.ലിറ്റർ
100 മില്ലി ലിറ്റർ
200 മില്ലി ലിറ്റർ
50 ML
50 മില്ലി.ലിറ്റർ
By Bhadhra A-J

**Bangra**




48 G h s s Bangramanjeshwar



## ಪ್ರತಿಭೆಗಳೊಂದಿಗೆ

‘ಸಾರ್ವಜನಿಕ ವಿದ್ಯಾಲಯ ಸಂರಕ್ಷಣಾ ಯಜ್ಞ' ಎಂಬ ಕಾರ್ಯ ಕ್ರಮವು ಕೋರಳದಾದ್ಯಂತ ಈಗಾಗಲೇ ನಡೆದು ಬಂದಿರುವುದನ್ನು ಕಾಣಬಹುದು.ಈ ಕಾರ್ಯಕ್ರಮದ ಅಂಗವಾಗಿ ನಡೆಯುವ ಒಂದು ಕರ್ಯ ಕ್ರಮವಾಗಿದೆ, 'ಪ್ರತಿಭೆಗಳೊಂದಿಗೆ ವಿದ್ಯಾಲಯ'ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಕೈ ಜದೋಡಿಸಿದ ಹಲವಾರು ಶಾಲೆಗಳಲ್ಲಿ ಒಂಗಾಗಿದೆ ಸರಕಾರಿ ಫ್ರೌಢ ಶಾಲೆ ಬಂಗ್ರ ಮಂಜೇಶ್ವರ.ಈ ಶಾಲೆ ವಿದ್ಯಾರ್ಥಿಗಳು ಹಾಗೂ ಅದ್ಯಾಪಕರು ಮಂಜೇಶ್ವರದಲ್ಲಿರುವ 'ನಾಟ್ಯಗುರು' ಎಂದು ಬಿರುದು ಪಡೆದಿರುವ ಬಾಲಕೃಷ್ಣ ಮಂಜೇಶ್ವರ ಅವರನ್ನು ಭೇಟಿ ಮಾಡಿದರು.

ಬಾಲಕೃಷ್ಣ ಮಂಜೇಶ್ವರ ಅವರು ಸಪ್ತ ಭಾಷಾ ಸಂಗಮಭೂಮಿ ಕಾಸರಗೋಡಿನ ಮಂಜೇಶ್ವರದಲ್ಲಿ ಜನಿಸಿದರು.ಅವರ ತಾಯಿ ಅಧ್ಯಾಪಕರಾಗಿದ್ದರು.ತಂದೆ ಪೋಲೀಸ್ ಆಫೀಸರಾಗಿದ್ದರು.ಕಡು ಬಡತನದಿಂದ ಜೀವನ ಸಾಗಿಸಿದ್ದ ಇವರ ತಾಯಿ ತಮ್ಮ ಶಾಲೆಯ ಮಕ್ಕಳಿಗಾಗಿ ಜೀವನವನ್ನು ಮೀಸಲಿಟ್ಟಿದ್ದರು.ತಮ್ಮ ಬಾಲ್ಯದ ಬಗ್ಗೆ ಹೇಳುವಾಗ ಬಾಲಕೃಷ್ಣ ಅವರು ಕಣ್ಣೀರು ತಂದುಕೊಂಡು ತಮ್ಮ ತಾಯಿಯನ್ನು ನೆನಪಿಸಿಕೊಂಡರು.ಬಾಲಕೃಷ್ಣ ಹೊಸಂಗಡಿಯವರು ಏಳು ಜನ ಮಕ್ಕಳಾಗಿದ್ದರು.ಅದರಲ್ಲಿ ಇವರು ಐದನೆಯವರಾಗಿದ್ದರು.ಬಾಲ್ಯದಲ್ಲೇ ಇವರು ಕಲಿಯುವುದರಲ್ಲಿ ತುಂಬಾ ಮೊದಲಿದ್ದರು.ಆದರೆ ಅದಕ್ಕೆ ಸರಿಯಾದ ಸೌಲಭ್ಯವಿರಲಿಲ್ಲ.ಜೀವನದ ನಿರ್ವಹಣೆಯೇ ತುಂಬಾ ದುಸ್ತರವಾಗಿದ್ದ ಸಂದರ್ಭದಲ್ಲೇ ಶಾಲೆಯಲ್ಲಿರುವ ಮುಸ್ಲಿಂ ಅದ್ಯಾಪಕರ ಪ್ರೋತ್ಸಾಹದಿಂದ ಅರಬ್ಬಿ ಅಕ್ಷರ ಬರೆಯಲು ಕಲಿತ ಕಾಸರಗೋಡಿನ ಮೊದಲ ಹುಡುಗ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಬಾಲಕೃಷ್ಣನವರು ಮೊದಲಿಗೆ ಡ್ಯಾನ್ಸ್ ಕಲಿಯಲು ಪ್ರೇರಣೆ ಎಂದರೆ ಅಮ್ಮ ತಿಂಗಳಿಗೊಮ್ಮೆ ತೋರಿಸುತ್ತಿದ್ದ ಶಿವರಾಮನ ಬ್ರೇಕ್ ಡ್ಯಾನ್ಸ್ ಆಗಿತ್ತು.ಆದರೆ ಇವರಿಗೆ ನಾಟ್ಯದಲ್ಲಿ ಆಸಕ್ತಿ ಇರಲಿಲ್ಲ.ಇವರ ಅಕ್ಕನನ್ನು ಅಮ್ಮ ನೃತ್ತ ಶಾಲೆಗೆ ಹಾಕಿದರು.ಆದರೆ ಅಕ್ಕನಿಗೆ ನೃತ್ಯಕ್ಕೆ ಹೆಜ್ಜೆ ಹಾಕಲು ಬರದೇ ಇದ್ದುದರಿಂದ ಆ ಭಾಗ್ಯ ಬಾಲಕೃಷ್ಣರವರಿಗೆ ಲಭಿಸಿತು.ಎಂದು ಕೃತಜ್ಞತಾ ಭಾವದಿಂದ ಸ್ಮರಿಸಿದರು.ಬಾಲಕೃಷ್ಣರವರಿಗೆ ಒಬ್ಬ ಪೋಲೀಸ್

ಆಫೀಸರ್ ಆಗಬೋಕೆಂಬ ಆಸೆ ಬಹಳವಾಗಿತ್ತು.ಆದರರೆ ಆ ಕನಸು ನನಸಾಗಲಿಲ್ಲ.ವಿಧಿಯಾಟ ಬೇರೆಯೇ ಆಗಿತ್ತು.ಒಬ್ಬ ನಾಟ್ಯಗಾರನಾಗಬೇಕೆಂಬ ಆಸೆಂದು ಹೋಳಿದರು.

ಉಳ್ಳಾಳದಲ್ಲಿರುವ ಮೋಹನ್ ಕುಮಾರ್ ಅವರ ಶಿಷ್ಯನಾಗಿದ್ದುಕೊಂಡು ಭರತನಾಟ್ಯವನ್ನು ಕಲಿಯಲು ತೊಡಗಿದರು.ನಂತರ ಎಲ್ಲರೂ ನಾಟ್ಯರಂಗದಲ್ಲಿ ಎಲ್ಲರೂ ಗುರುತಿಸುವಂತಹ ನಾಟ್ಯಗುರುವಾದರು.ನಾಟ್ಯಾಲಯ ಎಂಬ ಹೆಸರಿರುವ ನಾಟ್ಯಶಾಲೆಯನ್ನು ಆರಂಭಿಸಿದರು.ಹಲವಾರು ವಿದ್ಯಾರ್ಥಿಗಳಿಗೆ ನೃತ್ಯ ಕಲಿಸುವ ಗುರುವಾದರು.ಇವರಿಗೆ ನಾಟ್ಯ ರಂಗದಲ್ಲಿ ಹಲವಾರು ಪ್ರಶಸ್ತಿಗಳು ಲಭಿಸಿವೆ.ಇವರಿಗೆ ೧೯೯೩ರಂದು ಮೊತ್ತ ಮೊದಲ ಪ್ರಶಸ್ತಿ ಬಂದಿರುವುದು.ಕಲಾತಪಸ್ವಿ,ಕಲಾಸಿಂಧು,ಮೈಸೂರು ಕಲಾಕ್ಷೇತ್ರ,ಕಲಾನಿಧಿ,ಕರ್ನಾಟಕ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಂದ ಪ್ರಶಸ್ತಿಗಳನ್ನು ಪಡೆದಿದ್ದಾರೆ.ಆದರೆ ಎಲ್ಲಾ ಪ್ರಶಸ್ತಿಗಳು ಅವರು ಅತ್ಯಧಿಕವಾಗಿ ಇಷ್ಟಪಡುವ

ಸಂಗತಿಯೆಂದರೆ ಗಾನಗಂಧರ್ವರಾದ ಯೇಸುದಾಸ್ ಅವರು ಸ್ವತಃ ಕರೆದು ಶಾಲು ಹೊದಿಸಿ ಸನ್ಮಾನಿಸಿರುವುದು.ಅವರಿಗೆ ಜೀವನದಲ್ಲಿ ದೊರೆತ ದೊಡ್ಡ ಪ್ರಶಸ್ತಿಯೆಂದು ಪುಳಕಿತರಾಗಿ ನುಡಿದರು.

ಅದ್ಯಾಪಕರು ದೇವರಿಗೆ ಸಮಾನ ನಾವು ಅದ್ಯಾಪಕರನ್ನು ಗೌರವಿಸಬೇಕು ನಮ್ಮನ್ನು ಅವರು ಪ್ರೀತಿಯಿಂದ ಪ್ರೀತಿಸುತ್ತಾರೆ.ಅವರು ನಮ್ಮನ್ನು ಶಿಕ್ಷಿಸುವುದು ನಮ್ಮ ಒಳ್ಳೆಯದಕ್ಕೆ ನಮಗೆ ಎಂದೂ ಕೆಟ್ಟದ್ದನ್ನು ಬಯಸಲಾರರು.ಅವರನ್ನು ನಾವು ಗೌರವಿಸಿದರೆ ದೇವರನ್ನು ಗೌರವಿಸಿದಂತೆ ಎಂದು ಹೇಳಿ ತನಗೆ ಕಲಿಸಿದ ಅದ್ಯಾಪಕರನ್ನು ನೆನೆಸಿಕೊಂಡರು.ಕೊನೆಯದಾಗಿ ಕೇರಳ ಸರಕಾರವು ಆಯೋಜಿಸಿದ ಪ್ರತಿಭೆಗಳೊಂದಿಗೆ ವಿದ್ಯಾಲಯ ಎಂಬ ಕಾರ್ಯಕ್ರಮ ಉತ್ತಮವಾಗಿದೆ ಸಮಾಜದಲ್ಲಿ ಎಷ್ಟೋ ಮಂದಿ ಎಲೆಮರೆಯ ಕಾಯಿಯ ಹಾಗಿರುವ ಪ್ರತಿಭೆಗಳಿದ್ದಾರೆ.ಅವರನ್ನು ಗುರುತಿಸಿ ಈ ರೀತಿ ಸನ್ಮಾನಿಸುವ ಕಾರ್ಯಕ್ರಮ ತುಂಬ ಉತ್ತಮ ವಾಗಿ ಮೂಡಿ ಬಂದಿದೆ ಎಂದು ಅಭಿಪ್ರಾಯ ಪಟ್ಟರು.

***Renuka b s***

***TEACHER***



## ಓಟ

*ಆತ ಓಡುತ್ತಲೇ ಇದ್ದ. ತುಂಬಾ ವರ್ಷಗಳಾಯಿತು ಆತ ಈ ಓಟ ಆರಂಭಿಸಿ. ಈ ಬದುಕಿನಲ್ಲಿ ತನ್ನ ಈ ಓಟ ಪೂರ್ತಿಗೊಳಿಸಿ ಒಮ್ಮೆ ವಿಶ್ರಾಂತಿ ಪಡೆಯಬೇಕೆಂದು ಆತ ತುಂಬಾ ದಿನಗಳಿಂದ ಯೋಚಿಸುತ್ತಿದ್ದ. ಆದರೆ ಆತನಿಗೆ ಒಂದಿಷ್ಟು ನಿರೀಕ್ಷೆಯಿಲ್ಲ. ಆದರೂ ಆತ ತನ್ನ ಓಟವನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದ.*

*ಮಗುನಾಗಿದ್ದಾಗ ಆತನಿಗೆ ಇಷ್ಟ ದುಂಬಿಗಳನ್ನೂ, ಚಿಟ್ಟೆಗಳನ್ನೂ, ನದಿಲ್ಲಿರುವ ಏಡಿಗಳನ್ನೂ ಓಡಿಸಿ ಹಿಡಿಯುವುದರಲ್ಲಾಗಿತ್ತು. ಆದರೆ ದೇವರಿಗೆ ಕರುಣೆಯೇ ಇಲ್ಲ ಎಂಬಂತೆ ತನ್ನ ಎಳೆ ಪ್ರಾಯದಲ್ಲೇ ಕುಟುಂಬದ ಭಾರವನ್ನು ಹೊತ್ತು ಓಡಬೇಕಾಯಿತು. ತಂದೆಯ ಚಿತೆಗೆ ಬೆಂಕಿ ಇಟ್ಟಾಗ ಆತನಿಗೆ ತಿಳಿಯಿತು ತನಗಿನ್ನು ವಿಶ್ರಾಂತಿಯಿಲ್ಲ. ಇಬ್ಬರು ಸಹೋದರಿಯರಿಗೆ ಮದುವೆಯಾದರೆ ತನಗೆ ವಿಶ್ರಾಂತಿ ಪಡೆಯಬಹುದೆಂದು ಆತ ಯೋಚಿಸಿದ. ಆದರೆ ದಿಢೀರನೆ ಮಾವನ ಮಗಳೊಂದಿಗೆ ಆತನ ಮದುವೆ. ಬದುಕಿನ ಭಾರವನ್ನು ಹಂಚಿಕೊಳ್ಳಲು, ಓಟದ ಮಧ್ಯೆ ಕೈ ಹಿಡಿಯಲೂ ಒಬ್ಬರು ಇರಲಿ ಆತ ತನಗೆ ತಾನೇ ಹೇಳಿದ. ವಿಶ್ರಮಿಸಲು ಸಮಯ ಸಿಕ್ಕುವ ಮೊದಲೇ, ಲೋಕ ಏನೆಂದು ತಿಳಿಯದ ಇಬ್ಬರು ಮಕ್ಕಳನ್ನು ತನಗೆ ಒಪ್ಪಿಸಿ ಪ್ರಿಯ ಸಖಿಯೂ ಹೋದಳು. ಅತ್ತ ತಂದೆಯ ಮರಣ... ಇತ್ತ ಪತ್ನಿಯ ಮರಣ...*

*ಇವತ್ತು ಇಬ್ಬರಲ್ಲಿ ಕಿರಿಯ ಮಗಳ ಮದುವೆಯಾಗಿತ್ತು. ವರನ ಕೈ ಹಿಡಿದು ಕೊಟ್ಟು ಆತ ಮಗಳ ಮುಖವನ್ನು ನೋಡಿ ತಿರುಗಿ ನಡೆದನು. ಮದುವೆ ಮಂಟಪದ ಯಾರೂ ಇಲ್ಲದ ಒಂದು ಬದಿಯಲ್ಲಿ ಆತ ಯಾರ ಕಣ್ಣಿಗೂ ಬೀಳದೆ ಇಳಿದು ಓಡಿದ. ಎಲ್ಲಿಯಾದರೂ ತನಗೆ ವಿಶ್ರಾಂತಿ ಪಡೆಯಬೇಕು. ಅದಕ್ಕಾಗಿ ಇನ್ನೂ ಇನ್ನೂ ಓಡಬೇಕು.*

*ನಬೀಸತ್ತುಲ್ ಮಿಸಿರಿಯ ಪಿ. ಎಸ್*
*ಶಿಕ್ಷಕಿ*



## ವೈವಿಧ್ಯತೆಯ ಸೊಗಡು

ಬಹುಭಾಷೆಗಳ ಸುಂದರ ನಾಡು
ಹಲವು ಜಾತಿಮತಗಳ ತವರೂರು
ಕಲೆ ಸಂಸ್ಕೃತಿ ಆಚಾರ ವಿಚಾರಗಳ
ಕಂಪು ಸೂಸುತ್ತಿರುವ ಈ ಮಣ್ಣು
ವಿವಿಧತೆಯ ನಮ್ಮೀ ಕಾಸರಗೋಡು
ಸಾಹಿತ್ಯದ ಇತಿಹಾಸದ ಪುಟದಲ್ಲಿ
ರಾರಾಜಿಸಿದ ರಾಷ್ಟ್ರಕವಿ ಗೋವಿಂದ ಪೈ
ಗಡಿನಾಡ ಕವಿ ನಾಡೇಜ ಕಯ್ಯಾರರಿಗೆ
ಜನುಮವಿತ್ತ ನಮ್ಮೀ ಕಾಸರಗೋಡು
ಗಂಡು ಮಟ್ಟಿನ ಕಲೆ ಯಕ್ಷಗಾನ
ಭೂತಾರಾದನೆ ಜನಪದ ಕುಣಿತ
ಕಣ್ಮನ ಸೆಳೆವ ಬೇಕಲಕೋಟೆ
ಚಾರಣ ಪ್ರಿಯರ ಸ್ವರ್ಗ ರಾಣಿಪುರಂನ
ಸೊಗಡು ತುಂಬಿದ ನಮ್ಮೀ ಕಾಸರಗೇಡು
ಪ್ರಕೃತಿ ಸಿರಿಗೆ ಜೀವ ತುಂಬುವ
ನದಿಗಳು ಕೋಟೆಕೊತ್ತಲಗಳು
ಮತ ಸೌಹಾರ್ದತೆಗೆ ಸಾಕ್ಷಿಯಾಗಿರುವ
ಹಲವು ಧಾರ್ಮಿಕ ಪುಣ್ಯ ಕ್ಷೇತ್ರಗಳು
ಹೀಗೆ ಬಹು ಭಾಷೆಗಳಿದ್ದರೂ ಏಕತೆ
ಮೆರೆದು ನಿಂತ ನಮ್ಮೀ ಕಾಸರಗೋಡು

ಮೋಹನ ಯು
ಶಿಕ್ಷಕ



## ಜೀವನ

*ಜೀವನವು ಸಂಗೀತವಿದ್ದಂತೆ. ಯಾವುದೇ ಒಂದು ಗೀತೆ ಅಥವಾ ಒಂದು ಹಾಡು ಕೇಳುವವರ ಕಿವಿಗೆ ಇಂಪು ಮತ್ತು ಹಾಡುವವರ ಆತ್ಮಕ್ಕೆ ಶಾಂತಿಯನ್ನು ನೀಡಿ ಅದು ಒಳ್ಳೆಯ ಹಾಡು ಎಂದೆನಿಸಿಕೊಂಡರೆ ಅದು ಸಂಗೀತವಾಗುತ್ತದೆ. ಹಾಗೆಯೇ ಜೀವನವು ಸುಂದರ ಹಾಗೂ ಸುಖಮಯವಾಗಿದ್ದರೆ ಅದಕ್ಕೆ ಜೀವನ ಎಂದೆನ್ನುತ್ತಾರೆ. ಇಲ್ಲವಾದರೆ ಅದೊಂದು ಕತ್ತಲು ಮುಸುಕಿದ ಭಯಂಕರವಾದ ವನಕ್ಕೆ ಸಮವಾಗಿರುತ್ತದೆ.*

*ಸಂಗೀತದಲ್ಲಿ ಹಲವಾರು ರಾಗಗಳಿವೆ. ಪ್ರತಿಯೊಂದು ರಾಗದಲ್ಲೂ ವ್ಯತ್ಯಾಸಗಳು ಏರಿಳಿತಗಳಿವೆ. ಆದರೂ ಸಂಗೀತ ಸುಂದರ ,ಸುಖಮಯ ಕೇಳುವವರಿಗೂ ಹೇಳುವವರಿಗೂ ಶಾಂತಿ,ಸಂತೋಷ,ಸಮಧಾನ ಕೊಡುವಂತಹದ್ದು. ಅಂತೆಯೇ ಜೀವನದಲ್ಲಿ ಹಲವಾರು ಸಂದರ್ಭಗಳಿವೆ. ಸಿಹಿ ಕಹಿಯ ಅನುಭವಗಳಿವೆ. ಏರಿಳಿತರಳಿವೆ. ಸುಖ ದುಃಖಗಳಿವೆ. ಸಮಾನವಾಗಿ ಸ್ವೀಕರಿಸಿದರೆ ಜೀವನ ಸೊಗಸಾಗಿರುತ್ತದೆ.*

*ಸಂಗೀತದ ಮೂರು ಭಾಗಗಳಾದ ಪಲ್ಲವಿ, ಅನು ಪಲ್ಲವಿ ಮತ್ತು ಚರಣ ಜೀವನದ ಮೂರು ಹಂತಗಳಾದ ಬಾಲ್ಯ, ಯವ್ವನ ಮತ್ತು ಮುಪ್ಪನ್ನು ಹೋಲುತ್ತದೆ. ಹೇಗೆ ರಾಗ, ಭಾವ, ತಾಳಗಳು ಸೇರಿ ಸಂಗೀತವಾಗುತ್ತದೆಯೋ ಹಾಗಯೇ ಬದುಕಿನ ಸಿಹಿ ಕಹಿ ಅನುಭವಗಳೆಲ್ಲಾ ಸೇರಿ ಜೀವನವಾಗುತ್ತದೆ. ಅಂದರೆ ಸಂಗೀತವು ಜೀವನಕ್ಕೆ ಎಷ್ಟು ಹತ್ತಿರವಾರಿದೆಯಲ್ಲವೇ? ಆದ್ದರಿಂದ ನಾವು ನಮ್ಮೆಲ್ಲರ ಜೀವನವನ್ನು ಸಂಗೀತಮಯವಾಗಿಸಿ ಸಮೃದ್ಧವಾದ ಸಾಫಲ್ಯದ ಬದುಕನ್ನು ಶಾಂತಿಯಿಂದ ಬದುಕಿಬಾಳಬೇಕು.*

### "ಈಯ ಬೇಕು ಇದ್ದು ಜಯಿಸಬೇಕು"

*ಮಧುರ ಕೆ. ಎಂ*
*ಶಿಕ್ಷಕಿ*

Bangra



## ಎಷ್ಟು ಸುಂದರ ಈ ಮುಪ್ಪು ?

*ದಿನದ ಅತೀ ಸುಂದರವಾದ ಕಾಲ ಸಂಧ್ಯಾ ಕಾಲ.ಸೂರ್ಯ ಉದಯಿಸುವಾಗ ಅವನ ಕಿರಣಗಳು ಜನರ ಕಣ್ಣು ಮುಚ್ಚಿಸುತ್ತದೆ.ಅದೇ ಸೂರ್ಯ ಮುಳುಗುವಾಗ ಜನರು ಆನಂದದಿಂದ ಅನುಭವಿಸುವುದು ಸುಂದರ ಸಂಜೆಯ ಸೂರ್ಯಾಸ್ತ.*

*ಮುಪ್ಪನ್ನು ಸುಂದರವಾದ ಸಂಜೆಗೆ ಹೋಲಿತ್ತಾರೆ.ಇದು ಜೀವನದ ಸಂಧ್ಯಾಕಾಲವೆಂದು ವರ್ಣಿಸುತ್ತಾರೆ.ದಿನದ ಕೊನೆಯ ಕಾಲವಾದ  ಸಂಜೆಗೂ ಮತ್ತು ಜೀವನದ ಕೊನೆಯ ಹಂತವಾದ ಮುಪ್ಪಿಗೂ ಸಾಕಷ್ಟು ವ್ಯತ್ಯಾಸಗಳಿವೆ, ಅಂತರಗಳಿವೆ.ಆದರೂ ಈ ಹೋಲಿಕೆಗಳು ಸತ್ಯ,ಶಾಶ್ವತ.*

*ಸಂಜೆಯಾಗುತ್ತಲೇ ಸೂರ್ಯ ಮಳುಗಿ , ಚಂದ್ರ ಉದಯಿಸುತ್ತಾನೆ.ಕತ್ತನು ಬೆಳಕನ್ನು ನುಂಗಲಾರಂಭಿಸುತ್ತದೆ.ಪ್ರಾಣಿ,ಪಕ್ಷಿಗಳು ತಮ್ಮ ತಮ್ಮ ಗೂಡು ಸೇರಿಕೊಳ್ಳುತ್ತವೆ.ಆದರೆ ಅದೇ ಸಂಜೆ ಜೀವನದಲ್ಲಿ ಎದುರಾದಾಗ ಕತ್ತಲೆ ಏನೋ ಬೆಳಕನ್ನು ನುಂಗುತ್ತದೆ.ಆದರೆ ಯಾವ ಸೂರ್ಯಸ್ತವು ಕಾಣುವುದಿಲ್ಲ,ಯಾವ ಚಂದ್ರನು ಉದಯಿಸುವುದಿಲ್ಲ.ಮಿಲುಗುವ ನಕ್ಷತ್ರವಂತೂ ದೂರದ ಮಾತಾಯಿತು.ಜೀವನದಲ್ಲಿ ಇಂತಹ ಕೈಲಾಗದ ಜೀವಗಳು ಬೆಳಕಿನ ಚಿಕ್ಕ ಕುರುಹೂ ಕಾಣದಂತಾಗುತ್ತದೆ.ಚಿಂತೆ ಚಿತೆಯೆಡೆಗೆ ಚಾಚುತ್ತದೆ.*

*ಮುಪ್ಪಿಲ ಹಂತದಲ್ಲಿ ಮನೆಯಲ್ಲಿರಬೇಕಾದ ಜನರು ಮನೆಯಿಂದಾಚೆ ತೆರಳಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ.ಯಾಕೆ ಈ ಗತಿ? ಮುಪ್ಪು ಇಷ್ಟು ಕಷ್ಟವೇ ಎಂಬ ಪ್ರಶ್ನೆಗಳೆಲ್ಲಾ ಕಾಡತೊಡಗುತ್ತದೆ.ಮುಪ್ಪಿಗೆ ಹತ್ತಿರ ವಾಗುತ್ತಿರುವಂತಹ ಜನರು ಹೆದರುವಂತಹ ಪ್ರಮೇಯ ಎದುರಾಗುತ್ತಿದೆ.ಹೀಗೊಂದು ಭಯ ನಿರ್ಮಾಣವಾದಾಗ ಬದುಕು ಹಿಂಸೆ ಎಂದೆನಿಸುತ್ತದೆ.*

*ಹೀರಿದ್ದಲ್ಲಿ ಮುಪ್ಪು ದೇಹಕ್ಕೆ ವಿನಹ ಮನಸ್ಸಾಗಲ್ಲವೆಂದು ಅಂತುಕೊಂಡು,ವೃದ್ಧಾಪ್ಯದಲ್ಲಿ ಮನಸ್ಸನ್ನು ಧೃಢವಾಗಿಟ್ಟುಕೊಂಡು ,ವಯಸ್ಸಿಗೆ ತಕ್ಕಂತೆ ವರ್ತಿಸಿ ,ಸಮಯದಯಾವುದೇ ಏರಿಳಿತಗಳಿಗೆ ಹತಾಷರಾಗದೆ ಮನಸ್ಸನ್ನು ಸಮತೋನದಲ್ಲಿಟ್ಟುಕೊಂಡು ಪರಾವಲಂಬಿಯಾಗಬೇಕಾದ ಪರಿಸ್ಥಿತಿಯಲ್ಲೂ ಸ್ವಾವಲಂಬಿಯಾಗಿರಲು ಪ್ರಯತ್ನಿಸಿ ಆತ್ಮ ವಿಶ್ವಾಸ ಮತ್ತು ಆತ್ಮ ಗೌರವವನ್ನು ಉಳಿಸಿಕೊಳ್ಳಬೇಕು.' ಇದು ಸಾಧ್ಯವೇ '? ಎಂಬ ಪ್ರಶ್ನೆ ಬಂದಾಗ ನಾವೆಲ್ಲರೂ ಪ್ರಬುದ್ಧರಾಗಿ ವರ್ತಿಸಬೇಕು.*

*ಮಾಗಿದ ಹಣ್ಣು ಸವಿಯನ್ನು ಹೆಚ್ಚಿಸುತ್ತಾ ಹೋಗುವ ರೀತಿಯಲ್ಲಿ ಮನುಷ್ಯನ ಜೀವನವು ಮುಪ್ಪಿನ ಕಡೆಗೆ ಸಾಗುತ್ತಿರುವಾಗ ಅನುಭವದ ಆಕಾರವಾಗುತ್ತದೆ.ಮುಪ್ಪಿನಲ್ಲಿ ಅನುಭವದ ಹೂಗಳು ಅರಳಿದರೆ ಮುಪ್ಪು ಖಂಡಿತಾ ಸುಂದರವಾಗಬಲ್ಲುದು ಎಂಬ ಸತ್ಯವನ್ನಂತೂ ಜೀವನದ ಬಂಡಿಯನ್ನು ಸುಖದಿಂದ ಸಾಗಿಸುವತ್ತ ಗಮನಿಸಬೇಕು.*

**ಮಧುರ. ಕೆ.ಎಂ.**

**ಶಿಕ್ಷಕಿ**

## RETIRED HEADMISTRESS

# ಅಧ್ಯಾಪನ ವೃತ್ತಿಯಿಂದ ನಿವೃತ್ತಿ ಹೊಂದುತ್ತಿರುವ ಮುಖ್ಯಶಿಕ್ಷಕಿ ಲೋಲಾಕ್ಷಿ

• ಮೋಹನ ಯು

ಅಧ್ಯಾಪನ ವೃತ್ತಿಗಿಂತ ಶ್ರೇಷ್ಠ ವೃತ್ತಿ ಇನ್ನೊಂದಿಲ್ಲ ಎಂಬ ಮಾತೊಂದಿದೆ. ನಿಜವಾಗಿಯೂ ಇದು ಅಕ್ಷರಶಃ ಸತ್ಯ. ಓರ್ವ ಶಿಕ್ಷಕ ಸ್ವಾರ್ಥ, ಅಸಮಾನತೆ, ಕ್ರೋಧವನ್ನು ಮರೆತು ವಿದ್ಯಾದಾನ ಮಾಡಿದಾಗಲೇ ಉತ್ತಮ ಸಮಾಜ ನಿರ್ಮಾಣವಾಗುವುದು. ಇಂದು ನಮ್ಮ ಮುಂದೆ ಅದೆಷ್ಟೋ ಉತ್ತಮ ಅಧ್ಯಾಪಕರು ಶಾಲೆಗಾಗಿ ಮತ್ತು ಸಮಾಜಕ್ಕಾಗಿ ತಮ್ಮ ಸೇವೆಯನ್ನು ಮುಡಿಪಾಗಿಟ್ಟುಕೊಂಡು ಕಾರ್ಯ ನಿರ್ವಹಿಸುವವರಿದ್ದಾರೆ. ಇಂತಹ ಹಲವು ಉತ್ತಮ ಗುಣಗಳನ್ನು ಹೊಂದಿದ್ದು, ನಿಸ್ವಾರ್ಥ ಸೇವಾ ಮನೋಭಾವದಿಂದ ಸುಮಾರು 23 ವರ್ಷಗಳ ಕಾಲ ಪ್ರೌಢಶಾಲಾ ಗಣಿತ ಅಧ್ಯಾಪಿಕೆಯಾಗಿ ಮತ್ತು 5 ವರ್ಷಗಳ ಕಾಲ ಮುಖ್ಯ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸಿದವರು ಬಂಗ್ರಮಂಜೇಶ್ವರ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಲೋಲಾಕ್ಷಿಯವರು. ತಮ್ಮ ಸುದೀರ್ಘ ಕಾಲದ ಅಧ್ಯಾಪನ ಸೇವೆಯಿಂದ ಈ ಶೈಕ್ಷಣಿಕ ವರ್ಷದಲ್ಲಿ ವೃತ್ತಿಯಿಂದ ನಿವೃತ್ತಿ ಹೊಂದುತ್ತಿದ್ದಾರೆ.



ಕಾಸರಗೋಡು ಜಿಲ್ಲೆಯ ಮುಳ್ಳೇರಿಯದ ತ್ಯಾಂಪಣ್ಣ ರೈ ಮತ್ತು ಭವಾನಿ ರೈ ದಂಪತಿಯ ಮೂವರು ಮಕ್ಕಳಲ್ಲಿ ಹಿರಿಯವಳಾಗಿ 1963 ಮಾರ್ಚ್ 27ರಂದು ಜನಿಸಿದರು. ಇಬ್ಬರು ಸಹೋದರರ ಪ್ರೀತಿ, ತಂದೆ, ತಾಯಿಯರ ಸದ್ಗುಣಗಳನ್ನು ಮೈಗೂಡಿಸಿಕೊಳ್ಳುತ್ತಾ ಬೆಳೆದವರು. ಅವರಿಗೆ ಬಾಲ್ಯದಲ್ಲೇ ಗಣಿತವೆಂದರೇ ಅಪಾರ ಆಸಕ್ತಿ. ಆ ಕಾರಣದಿಂದಲೇ ಮುಂದಕ್ಕೆ ಗಣಿತದ ಉತ್ತಮ ಅಧ್ಯಾಪಿಕೆಯಾಗಿ ಸಾವಿರಾರು ಮಕ್ಕಳಿಗೆ ಪಾಠ ಹೇಳಲು ಸಾಧ್ಯವಾಯಿತು. ತನ್ನ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಮುಳ್ಳೇರಿಯದ ಸರಕಾರಿ ಶಾಲೆ ಮತ್ತು ಅನುದಾನಿತ ಶಾಲೆಯಲ್ಲೂ, ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಸರಕಾರಿ ಕಾಲೇಜು ಕಾಸರಗೋಡಿನಲ್ಲೂ ಪೂರೈಸಿರುವರು. ತಲಶ್ಶೇರಿಯ ಸರಕಾರಿ ಕಾಲೇಜಿನಲ್ಲಿ ಬಿಎಡ್ ಅಧ್ಯಾಪಕಿ ತರಬೇತಿಯನ್ನು ಪಡೆದು ಮುಂದೆ ಅಧ್ಯಾಪನ ಜೀವನಕ್ಕೆ ಕಾಲಿಟ್ಟರು. 1991 ಜೂನ್ 20 ರಂದು ಅಡೂರು ಪ್ರೌಢಶಾಲೆಯಲ್ಲಿ ಗಣಿತ ಅಧ್ಯಾಪಿಕೆಯಾಗಿ ಔದ್ಯೋಗಿಕ ಜೀವನಕ್ಕೆ ಪಾದಾರ್ಪಣೆಗೈದರು. 1993 ಮೇ 7ರಂದು ಪುತ್ತಿಗೆ ನಿವಾಸಿ ಮುಂಡಿತ್ತಡ್ಕ ಶಾಲೆಯ ಅಧ್ಯಾಪಕ ಉಮಾನಾಥ ಅವರೊಂದಿಗೆ ವಿವಾಹವಾಗಿ ಸ್ವಾತಿ ಎಂಬ ಮಗಳನ್ನು ಪಡೆದಿದ್ದಾರೆ. ಮಗಳಿಗೆ ಕನ್ನಡ ಮಾಧ್ಯಮದಲ್ಲೇ ವಿದ್ಯಾಭ್ಯಾಸ ನೀಡಿ, ಇದೀಗ ಆಯುರ್ವೇದಿಕ್ ವೈದ್ಯಕೀಯ ಶಿಕ್ಷಣ ಪಡೆದು ವೈದ್ಯೆಯಾಗಿದ್ದಾರೆ. 1995ರಲ್ಲಿ ಅಡೂರು ಶಾಲೆಯಿಂದ ಅಂಗಡಿಮೊಗರು ಪ್ರೌಢಶಾಲೆಗೆ ವರ್ಗಾವಣೆಗೊಂಡು ಸತತ 19 ವರ್ಷಗಳ ಕಾಲ ನಿಸ್ವಾರ್ಥ ಸೇವೆ ಸಲ್ಲಿಸಿ ಶಾಲೆ ಹಾಗೂ ಸಮಾಜದೊಂದಿಗೆ ಉತ್ತಮ ಬಾಂಧವ್ಯವನ್ನಿಟ್ಟುಕೊಂಡಿದ್ದಾರೆ. ದುಡಿಮೆಯೇ ದೇವರೆಂದು ತಿಳಿದ ಅವರು ದುಡಿಮೆಗೆ ಮೊದಲ ಆದ್ಯತೆಯನ್ನು ನೀಡಿ, ಸೇವಾವಧಿಯಲ್ಲಿ ಅನಗತ್ಯವಾಗಿ ವಿರಾಮವನ್ನು ಬಯಸದೆ ಶಾಲೆಯ ಉನ್ನತಿಗಾಗಿ ಹಗಲಿರುಳು ಶ್ರಮಿಸಿದ್ದಾರೆ. ಬಳಿಕ 2014 ಜುಲೈ 18ರಂದು ಮುಖ್ಯ ಶಿಕ್ಷಕಿಯಾಗಿ ಭಡ್ತಿ ಪಡೆದು ಬಂಗ್ರಮಂಜೇಶ್ವರ ಸರಕಾರಿ ಪ್ರೌಢಶಾಲೆಗೆ ನೇಮಕಗೊಂಡು 5 ವರ್ಷಗಳ ಕಾಲ ಸೇವಾ ಮನೋಭಾವದಿಂದ ದುಡಿದಿದ್ದಾರೆ. ಶಾಲೆಗೆ ಹಾಗೂ ಮಕ್ಕಳಿಗೆ ಸರಕಾ ರದಿಂದ ದೊರಕುವ ಸೌಲಭ್ಯಗಳನ್ನು ಕ್ಲಪ್ತ ಸಮಯಕ್ಕೆ ಒದಗಿಸಿಕೊಟ್ಟು ಎಲ್ಲರ ಮೆಚ್ಚುಗೆಯನ್ನು ಗಳಿಸಿದ್ದಾರೆ. ಕಲಿಕೆಯಲ್ಲಿ ಹಿಂದುಳಿದ, ಆರ್ಥಿಕ ವಾಗಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹವನ್ನು ನೀಡಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಇದೀಗ ಸರಕಾರದ ನಿಯಮಾನುಸಾರ ವೃತ್ತಿಯಿಂದ ನಿವೃತ್ತಿ ಹೊಂದುತ್ತಿರುವ ನಿಮ್ಮ ಜೀವನವು ಆರೋಗ್ಯ ಪೂರ್ಣವಾಗಿರಲೆಂದು ಹಾರೈಸೋಣ.

**Bangra**

## PRAVESHANOLSAVAM






## RANIPURAM



# ರಾಣಿಪುರಂನ

## ಪ್ರಕೃತಿ ಸೌಂದರ್ಯದಿಂದ ತಂಪಾದ ಕಣ್ಮನ

ಕೈಗೆಟುವಂತಿರುವ ಸಾಲು ಸಾಲು ಮೋಡಗಳು, ತಂಪಾದ ಗಾಳಿ, ಹಚ್ಚ ಹಸಿರು ಹುಲ್ಲುಗಾವಲು, ಹೆಬ್ಬಂಡೆಗಳ ಸೌಂದರ್ಯ ಜತೆಗೆ ಜೈವ ವೈವಿಧ್ಯದ ಆಗರ. ಹೀಗೊಂದು ಪ್ರಕೃತಿ ರಮಣೀಯ ಅನುಭವ ನಮಗಾಗಬೇಕಾದರೆ ಕಾಸರಗೋಡಿನ ಊಟಿ ಎಂದೇ ಪ್ರಸಿದ್ಧಿ ಪಡೆದಿರುವ ರಾಣಿಪುರಂ ಬೆಟ್ಟವನ್ನು ಏರಿ ಇಳಿಯಬೇಕು.

● ಮೋಹನ ಯು. ಮಂಜೇಶ್ವರ

ಎಂತಹ ವಿಸ್ಮಯ! ಪ್ರಾಕೃತಿಕ ಸೌಂದರ್ಯದ ಗಣಿಯೇ ಅಲ್ಲಿ ಎದ್ದು ನಿಂತಿದೆ. ಗಗನವನ್ನು ಚುಂಬಿಸುವಂತೆ ಭಾಸವಾಗುತ್ತಿದೆ ಗಿರಿ, ಶಿಖರಗಳು. ಕೈಗೆಟುವಂತಿರುವ ಸಾಲು ಸಾಲು ಮೋಡಗಳು, ತಂಪಾದ ಗಾಳಿ, ಹಚ್ಚ ಹಸಿರು ಹುಲ್ಲುಗಾವಲು, ಹೆಬ್ಬಂಡೆಗಳ ಸೌಂದರ್ಯ ಜತೆಗೆ ಜೈವ ವೈವಿಧ್ಯದ ಆಗರ. ಹೀಗೊಂದು ಪ್ರಕೃತಿ ರಮಣೀಯ ಅನುಭವ ನಮಗಾಗಬೇಕಾದರೆ ಕಾಸರಗೋಡಿನ ಊಟಿ ಎಂದೇ ಪ್ರಸಿದ್ಧಿ ಪಡೆದಿರುವ ರಾಣಿಪುರಂ ಬೆಟ್ಟವನ್ನು ಏರಿ ಇಳಿಯಬೇಕು. ಹಾಗಂತ ರಾಣಿಪುರಂ ಕಾಡು ಬೆಟ್ಟವನ್ನು ಏರಿ ಇಳಿಯುವುದು ಅಷ್ಟು ಸುಲಭ ಸಾಧ್ಯವೂ ಅಲ್ಲ! ಯಾಕೆಂದರೆ ಬೆಟ್ಟದ ತಪ್ಪಲಿನಿಂದ ಸುಮಾರು ಎರಡೂವರೆ ಕಿಲೋ ಮೀಟರ್ ನಷ್ಟು ದೂರದ ಪ್ರಕೃತಿ ರಮಣೀಯ ಬೆಟ್ಟದ ತುದಿಯನ್ನು ತಲುಪಬೇಕಾದರೆ ಕಾಡು, ನಾಲ್ಕೈದು ಗಿರಿ, ಶಿಖರಗಳನ್ನು ದಾಟಿ ಹೋಗಬೇಕಿದೆ. ಅದೂ ಸಮುದ್ರ ಮಟ್ಟದಿಂದ 1046 ಮೀಟರ್ ಎತ್ತರದಲ್ಲಿದೆ ಎಂದು ಅರಣ್ಯಾಧಿಕಾರಿಗಳು ಹೇಳುತ್ತಾರೆ.

ರಾಣಿಪುರಂ ಚಾರಣಪ್ರಿಯರಿಗೆ ಸ್ವರ್ಗವಿದ್ದಂತೆ. ಮೂರು ವರ್ಷಗಳಿಂದ ನನ್ನ ಗೆಳೆಯರೊಬ್ಬರು ರಾಣಿಪುರಂ ನಿಸರ್ಗ ಧಾಮಕ್ಕೆ ಹೋಗಬೇಕು, ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಕಣ್ತುಂಬಾ ನೋಡಿ ಆನಂದಿಸಬೇಕು ಎಂದು ಹೇಳುತ್ತಾ ಇದ್ದರು. ಆ ಸಂದರ್ಭ ಕ್ರಿಸ್ಮಸ್ ರಜೆಯಲ್ಲಿ ಒದಗಿಬಂತು.

ಕಾಸರಗೋಡಿನಿಂದ ರಾಣಿಪುರಕ್ಕೆ ನೇರ ಬಸ್ ಸೌಕರ್ಯವಿಲ್ಲದ ಕಾರಣ ಕಾಞಂಗಾಡಿಗೆ ಸಾಗಿ ಅಲ್ಲಿಂದ ಹೋದೆವು. ಮಧ್ಯಾಹ್ನ 12 ಗಂಟೆಗೆ ಕಾಞಂಗಾಡ್ ಬಸ್ ನಿಲ್ದಾಣ ತಲುಪಿದ ನಾವು ಪಾಣತ್ತೂರು ಕಡೆಗೆ ಸಾಗುವ ಸರಕಾರಿ ಬಸ್ ಏರಿದೆವು. ಬಸ್ ನಿರ್ವಾಹಕನಲ್ಲಿ ರಾಣಿಪುರಂ ಬಗ್ಗೆ [illegible]

ರಾಣಿಪುರಂ ಪಯಣ ಮುಂದುವರಿಯಿತು. ರಾಣಿಪುರಂ ಬಗ್ಗೆ ಹಲವಾರು ಕನಸುಗಳನ್ನು ಕಾಣುತ್ತಾ ಸಾಗಿದೆವು. ಈ ಮಧ್ಯೆ ಕೆಲವು ಪೇಟೆಗಳ ಪರಿಚಯವನ್ನೂ ಮಾಡಿಕೊಂಡೆವು. ಅಂಬಲತ್ತರ, ಇರಿಯಾ, ಒಡೆಯಂಚಾಲ್, ರಾಜಪುರಂ, ಕಳ್ಳಾರ್, ಮಾಲಕಲ್ಲು, ಕೋಳ್ಚಾಲ್ ಇಲ್ಲಿನ ಕೆಲವು ಪ್ರದೇಶಗಳು. ಮಲೆನಾಡು ಪ್ರದೇಶದ ಆಸುಪಾಸಿನಲ್ಲಿ ಇರುವ ಕಾರಣ ಕೃಷಿಯೇ ಇಲ್ಲಿನವರ ಪ್ರಧಾನ ಕಸುಬಾಗಿರಬಹುದೆಂದು ನಾನು ಅಂದುಕೊಂಡೆ. ರಾಣಿಪುರಂ ಹತ್ತಿರವಾಗುತ್ತಿದ್ದಂತೆ ಪಶ್ಚಿಮ ಘಟ್ಟದ ಕೆಲವೊಂದು ಬೆಟ್ಟಗಳು ಆಕಾಶದೆತ್ತರಕ್ಕೆ ನಿಂತಿರುವುದು ಮನೋಹರವಾಗಿ ಕಾಣುತ್ತಿತ್ತು. ಮಧ್ಯಾಹ್ನ ಸುಮಾರು 1.20ರ ಸಮಯಕ್ಕೆ ಪನತ್ತಡಿ ಬಸ್ ನಿಲ್ದಾಣದಲ್ಲಿ ಇಳಿದೆವು. ಮಧ್ಯಾಹ್ನದ ಊಟಕ್ಕಾಗಿ ಸುತ್ತಲೂ ಕಣ್ಣು ಹಾಯಿಸಿದೆವು. ಪಕ್ಕದಲ್ಲೇ ಸಣ್ಣ ಹೋಟೆಲೊಂದು ಕಾಣಿಸಿತು. ಅಲ್ಲಿ ಊಟವನ್ನು ಮುಗಿಸಿ ಹೊರ ಬಂದೆವು. ಅಲ್ಲಿಂದ ರಾಣಿಪುರಂ ನಿಸರ್ಗಧಾಮಕ್ಕೆ 9 ಕಿಲೋ [illegible]

ತ್ತದೆ ಎಂದರು. ನಾವು ರಿಕ್ಷಾ [illegible] ದೆವು. ರಸ್ತೆಯ ಇಕ್ಕೆಲಗಳಲ್ಲೂ ದಟ್ಟವಾದ ಕಾಡು ತುಂಬಿತ್ತು. ಈ ರಸ್ತೆಯಲ್ಲಿ ಆನೆಗಳು ಅಡ್ಡಾಡುತ್ತಿವೆಯೇ ಎಂದು ಚಾಲಕನಲ್ಲಿ ಪ್ರಶ್ನಿಸಿದಾಗ ಹೌದು ಎಂದರು.

ಸಮಯ ಮಧ್ಯಾಹ್ನ 2.30. ರಾಣಿಪುರಂ ಶಿಖರದ ತಪ್ಪಲಲ್ಲಿ ಆಟೋ ನಿಂತಿತು. ಸುತ್ತಲೂ ಬೆಟ್ಟ ಗುಡ್ಡಗಳು, ಒಂದು ಸಣ್ಣ ಹೋಟೆಲ್ ಹಾಗೂ ಅರಣ್ಯಾಧಿಕಾರಿಗಳ ಕಚೇರಿ ಮಾತ್ರವಿತ್ತು. ಹೋಟೆಲ್‌ಗೆ ಚಹಾ ಕುಡಿಯಲೆಂದು ಪ್ರವೇಶಿಸಿದೆವು. ತಿಂಡಿ ಏನಿದೆ ಎಂದಾಗ ಕುಂಬ್ಳಪ್ಪ ಇದೆ ಎಂದರು. ನಮಗದು ಹೊಸ ತಿಂಡಿಯಾದ ಕಾರಣ ಅದೇ ಆಗಬಹುದೆಂದು ಸಮ್ಮತಿಸಿದೆವು. ಒಂದು ತಟ್ಟೆಯಲ್ಲಿ ಮೂರು ಕುಂಬ್ಳಪ್ಪ ತಂದಿಟ್ಟರು. ನಮ್ಮೂರಿನ ಕೊಟ್ಟಿಗೆಯಂತೆ ಒಂದೇ ಎಲೆಯಲ್ಲಿ ಸುತ್ತಿ ಬೇಯಿಸಿದ ತಿಂಡಿಯಾಗಿತ್ತು ಅದು. ಎಲೆಯನ್ನು ಬಿಡಿಸಿ ತಿಂಡಿಯನ್ನು ತಿಂದೆವು. ಅದು ಅಕ್ಕಿ, ಬೆಲ್ಲ, ತೆಂಗಿನಕಾಯಿ ಮತ್ತು ಕುಂಬಳಕಾಯಿಯನ್ನು ಸೇರಿಸಿ ತಯಾರಿಸಿದ ರುಚಿಯಾದ ತಿಂಡಿಯಾಗಿತ್ತು. ಚಹಾ ಕುಡಿದ ಬಳಿಕ ಬೆಟ್ಟವೇರುವ ಸಾಹಸಕ್ಕೆ ಮುಂದಾದೆವು. ಆರಂಭದಲ್ಲಿಯೇ ದಟ್ಟವಾದ ಕಾಡಿನ ಮಧ್ಯೆ ಏರುತ್ತಾ ಸಾಗುವ ಕಾಲುದಾರಿಯ ಮೂಲಕ ಅರ್ಧಗಂಟೆಯಷ್ಟು ಕಾಲ ನಡೆಯುತ್ತಾ ಸಾಗಿದೆವು. ಸೆಲ್ಫಿ ತೆಗೆದೆವು. ಕಾಡು ದಾರಿ ಮುಗಿಯುತ್ತಿದ್ದಂತೆ ಮತ್ತೆ ನಮಗೆ ಎದುರಾದ್ದು ಹಸಿರಾದ ಹುಲ್ಲು ತುಂಬಿದ ಗಿರಿ, ಶಿಖರಗಳು. ಸುತ್ತಲೂ ಕಣ್ಣು ಹಾಯಿಸಿದರೆ ಅಲ್ಲಲ್ಲಿ ಎತ್ತರಕ್ಕೆ ನಿಂತಿರುವ ಬೆಟ್ಟ ಗುಡ್ಡಗಳು. ಆ ಪ್ರಕೃತಿಯ ಸೊಬಗನ್ನೆಲ್ಲಾ ನೋಡಿ ಆನಂದಿಸುತ್ತಾ ರಾಣಿಪುರಂನ ಎತ್ತರವಾದ ಬೆಟ್ಟ ಹೆಬ್ಬಂಡೆಯನ್ನು ತಲುಪಲು ಒಂದು ಗಂಟೆ ಬೇಕಾಯಿತು. ಎತ್ತರದಲ್ಲಿರುವ ಹೆಬ್ಬಂಡೆ ಮೇಲೆ ನಾವು ಮೂವರು ನಿಂತುಕೊಂಡು ಫೋಟೋ ಕ್ಲಿಕ್ಕಿಸಿದೆವು. ಆದಾದ ಕೆಲವೇ ಕ್ಷಣಗಳಲ್ಲಿ ಆಕಾಶ ತುಂಬಾ ಮೋಡ ತುಂಬಿ ಮಳೆ ಹನಿಗಳು ಆರಂಭವಾಯಿತು. ಹನಿ ಹನಿ ಮಳೆಯಲ್ಲಿ ಹಲವು ಸಸ್ಯ ಪ್ರಬೇಧಗಳನ್ನು, ಸಾಲು ಮರಗಳು, ಪಕ್ಷಿ ಸಂಕುಲಗಳ ಇಂಚರ, ಗಿರಿ ಶಿಖರಗಳ ಅಂದವನ್ನು ಮನದಲ್ಲಿಯೇ ಆಸ್ವಾದಿಸುತ್ತಾ ಮರಳಿದೆವು.

**Bangra**



**Bangra**

# A TRIP TO MANIPAL


# ಸಾರ್ಥಕಗೊಂಡ ಶೈಕ್ಷಣಿಕ ಪ್ರವಾಸ

"ಇದೊಂದು ಅದ್ಭುತ ಅನುಭವ. ಇಂತಹದೊಂದು ಬೃಹತ್ ಪಾರಂಪರಿಕ ಪ್ರಾಚೀನ ವಸ್ತು ಸಂಗ್ರಾಹಲಯವನ್ನು ನೋಡಿರುವುದು ತುಂಬಾ ಖುಷಿಯಾ ಗಿದೆ" ಈ ಮಾತಿನಲ್ಲಿ ನಿಜವಾಗಿಯೂ ನೋಡಿ ಅನುಭವಿಸಿದ ಸೆಲೆ ತುಂಬಿತ್ತು. ಹೌದು! ಶಾಲಾ ಶೈಕ್ಷಣಿಕ ಪ್ರವಾಸದ ಮಧುರ ಕ್ಷಣಗಳ ಮನದಾಳದ ಮಾತುಗಳಿವು.

ಬಂಗ್ರಮಂಜೇಶ್ವರ ಸರಕಾರಿ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಚಿತ್ರಾಂಜಲಿಯ ಅನುಭವದ ಮಾತುಗಳಿವು. ಇತ್ತೀಚೆಗಷ್ಟೇ ಉಡುಪಿ ಜಿಲ್ಲೆಯ ಶಿಕ್ಷಣ ನಗರಿಯೆಂದೇ ಖ್ಯಾತಿ ಹೊಂದಿರುವ ಮಣಿಪಾಲದ ವಿವಿಧ ಪ್ರವಾಸಿ ತಾಣಗಳಾದ ಹಸ್ತ ಶಿಲ್ಪ ಹೆರಿಟೇಜ್ ವಿಲ್ಲೇಜ್, ಡಾ.ಟಿ.ಎಂ.ಎ ಪ್ಲಾನಿಟೋರಿಯಂ, ಮಣಿಪಾಲ ಮ್ಯೂಸಿಯಂ, ನಂದಿನಿ ಹಾಲಿನ ಡೈರಿ ಎಂಬೀ ಸ್ಥಳಗಳಿಗೆ ಶಾಲೆಯಿಂದ ಒಂದು ದಿನದ ಶೈಕ್ಷಣಿಕ ಪ್ರವಾ ಸವನ್ನು ಆಯೋಜಿಸಿಕೊಳ್ಳಲಾಗಿತ್ತು.

ನಮ್ಮ ಶೈಕ್ಷಣಿಕ ಪ್ರವಾಸದ ತಂಡದಲ್ಲಿ 82 ಮಕ್ಕಳು ಹಾಗೂ 8 ಮಂದಿ ಶಿಕ್ಷಕ-ಶಿಕ್ಷಕಿಯರಿದ್ದರು. ಕಳೆದ ನವೆಂಬರ್ ತಿಂಗಳ ಕೊನೆಯ ದಿನವಾಗಿತ್ತು ಪ್ರವಾಸ. ಒಂದು ದಿನದ ಪ್ರವಾಸದಲ್ಲಿ ನಮ್ಮನ್ನೆಲ್ಲಾ ಅಚ್ಚರಿ ಮೂಡಿಸುವಂತೆ ಮಾಡಿದ ಪ್ರಧಾನ ಪ್ರವಾಸಿ ತಾಣವೆಂದರೆ ಮಣಿಪಾಲದ 'ಹಸ್ತಶಿಲ್ಪ ಹೆರಿಟೇಜ್ ವಿಲ್ಲೇಜ್'.





ಯಾಕೆಂದರೆ ಇಲ್ಲಿ ನಾವು ನೋಡಿದಂತಹ ಪರಂಪರಾಗತ ಪ್ರಾಚೀನ ವಸ್ತುಗಳ ಬೃಹತ್ ಸಂಗ್ರಹ, ರಾಜ ಮನೆತನದ ಕಲಾತ್ಮಕ ಅರಮನೆಗಳು, ಅದರಲ್ಲೂ ಕೇರಳದ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಅದಮಾರು ಕುಂಜೂರಿನ ಚೌಕಿಮನೆ, ಕೇರಳದ ಪ್ರಸಿದ್ಧ, ವಿಶ್ವವಿಖ್ಯಾತ ಚಿತ್ರ ಕಲಾವಿದ ರಾಜಾರವಿವರ್ಮ ಅವರ ಚಿತ್ರ ಗ್ಯಾಲರಿ ಪ್ರವಾಸಿಗರ ಕಣ್ಮನ ತಣಿಸುತ್ತದೆ. ಅಂದು ನಾವು ಸರಿಸುಮಾರು ಬೆಳಿಗ್ಗೆ 7 ಗಂಟೆ ಹತ್ತು ನಿಮಿಷಕ್ಕೆ ಶಾಲೆಯಿಂದ ಪ್ರಯಾಣ ಹೊರಟು, ಗಡಿ ಪ್ರದೇಶವಾದ ತಲಪಾಡಿಯಲ್ಲಿ ನಮಗಾಗಿ ಕಾಯುತ್ತಾ ನಿಂತಿದ್ದ ಬಸ್ಸಿನಲ್ಲಿ 7.30ಕ್ಕೆ ಮಣಿಪಾಲದ ಹಾದಿ ಹಿಡಿದೆವು. ದಕ್ಷಿಣ ಕನ್ನಡದ ಚತುಷ್ಪಥ ರಾಜರಸ್ತೆ 66ರಲ್ಲಿ ಪ್ರಯಾಣಿಸುವಾಗ

ಮರೆಯಾಯಿತು. ಪ್ರಯಾಣದುದ್ದಕ್ಕೂ ಮಕ್ಕಳು, ಕೆಲ ಅಧ್ಯಾಪಕರು ಡಿ.ಜೆ. ಹಾಡಿಗೆ ಕುಣಿಯುತ್ತಾ ಸಂತಸದ ಕಡಲಲ್ಲಿ ತೇಲುತ್ತಿದ್ದರು. ಈ ಮಧ್ಯೆ ಪಡುಬಿದ್ರೆ ಸಮೀಪದ ಟೋಲ್‌ಗೇಟ್ ತಲುಪುತ್ತಿದ್ದಂತೆ ಬೆಳಗ್ಗಿನ ಉಪಹಾರಕ್ಕಾಗಿ ರಾಜರಸ್ತೆಯ ಒಂದು ಬದಿಯಲ್ಲಿ ಬಸ್ ನಿಂತಿತು. ಟೋಲ್ ಗೇಟ್ ಪರಿಸರವಾದ ಕಾರಣ ಪರಿಸರವೆಲ್ಲಾ ಶುಚಿಯಾಗಿತ್ತು. ಬಸ್ಸಿನಿಂದಿಳಿದ ಮಕ್ಕಳು, ಅಧ್ಯಾಪಕರು ಒಂದು ಕಡೆ ಸಾಲಾಗಿ ನಿಂತು ನಾವೇ ತಯಾರಿಸಿ ತಂದಂತಹ ಚಪಾತಿ ಗಸಿ ಮತ್ತು ಸಿಹಿ ಪಾನೀಯವನ್ನು ಸೇವಿಸಿದೆವು. ರುಚಿ ರುಚಿಯಾದ ಬೆಳಗ್ಗಿನ ಉಪಹಾರವನ್ನು ಸೇವಿಸಿದ ಎಲ್ಲರ ಮುಖದಲ್ಲೂ ಸಂತಸದ ನಗು ಹರಿಯಿತು. ಉಪಹಾರದ ಬಳಿಕ ಮತ್ತೆ ಪ್ರಯಾಣ ಮುಂದುವರಿಸಿದೆವು.

ಸಮಯ ಬೆಳಿಗ್ಗೆ 9.50ಕ್ಕೆ ಮಣಿಪಾಲದ ಡಾ. ಟಿ.ಎಂ.ಎ ಪ್ಲಾನಿಟೇರಿಯಂ ತಲುಪಿದೆವು. ಅಲ್ಲಿ



•ಮೋಹನ ಯು. ಮಂಜೇಶ್ವರ

ಒಂದರ್ಧ ಗಂಟೆ ಹೊರಗಡೆ ಮಕ್ಕಳೆಲ್ಲಾ ಸೆಲ್ಫಿ ಫೋಟೋಗಳಿಗೆ ಪೋಸ್ ನೀಡಿದ ಬಳಿಕ ಪ್ಲಾನಿಟೇರಿಯಂಗೆ ಆಮೆಚ್ಯೂರ್ ಥಿಯೇಟರ್‌ನ ಒಳಗೆ ಪ್ರವೇಶಿಸಿ ಚಿತ್ರ ವೀಕ್ಷಣೆಯ ನಂತರ ಹೊರಗಡೆ ಬಂದೆವು. ಅಲ್ಲಿಂದ ನೇರವಾಗಿ ಬಸ್ಸು ಹಸ್ತ ಶಿಲ್ಪ

ಗೈಡ್ ಶಾಂತಿ ಮತ್ತಿತರ ಉದ್ಯೋಗಿಗಳು ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿದರು. ಗೈಡ್ ಶಾಂತಿ 'ಮಿಯಾರ್ ಹೌಸ್' ಎಂಬ ರಾಜರ ಅರಮನೆಯ ಹೆಬ್ಬಾಗಿಲಿನ ಮುಂಭಾಗದಲ್ಲಿ ಸಾಲಾಗಿ ನಿಲ್ಲುವಂತೆ ನಮಗೆ ಸೂಚನೆ ಇತ್ತರು. ಬಳಿಕ ಹೆರಿಟೇಜ್ ವಿಲೇಜ್‌ನ ಸಂಕ್ಷಿಪ್ತ ಮಾಹಿತಿ ನೀಡಿದರು.

ಹಸ್ತ ಶಿಲ್ಪ ಹೆರಿಟೇಜ್ ವಿಲೇಜ್‌ಗೆ 6 ಎಕರೆ ಸ್ಥಳವಿದ್ದು, ವಿಜಯನಾಥ ಶೆಣೈ ಎಂಬವರು ಇದರ ನಿರ್ಮಾತೃ. ಇಲ್ಲಿ ಕಾಮಗಾರಿಗಳು ಪೂರ್ಣಗೊಂಡು ಇಂದೀಗ ಸಾರ್ವಜನಿಕರ ವೀಕ್ಷಣೆಗಾಗಿ ತೆರೆದುಕೊಂಡಿದೆ. ಬೆಳಿಗ್ಗೆ 10 ಗಂಟೆಯಿಂದ 12.30ರವರೆಗೆ, ಮಧ್ಯಾಹ್ನ 2.30ರಿಂದ 5 ಗಂಟೆವರೆಗೆ ಈ ಸಂಸ್ಕೃತಿ ಗ್ರಾಮದ ವೀಕ್ಷಣೆ ಮಾಡಬಹುದಾಗಿದೆ. ಇಲ್ಲಿರುವಷ್ಟು ಅಪಾರ ಸಂಖ್ಯೆಯ ರಾಜಮಹಾರಾಜರ ಕಾಲದ ಪ್ರಾಚೀನ ವಸ್ತುಗಳು ವೀಕ್ಷಣೆಗಾಗಿ ಬೇರೆಲ್ಲೂ ಸಿಗಲಾರದು. ಇಲ್ಲಿನ ವಸ್ತುಗಳಲ್ಲಿ



ಬಾಗಲಕೋಟೆಯ ಮುಧೋಳದ ರಾಜರ ಅರಮನೆ, ಕೊಪ್ಪಳ ಜಿಲ್ಲೆ ಕುಕನೂರಿನ ಕಮಲ್ ಮಹಲ್, ಮಂಗಳೂರಿನ ಕ್ರಿಶ್ಚಿಯನ್ ಮನೆ, ಪ್ರಸಿದ್ಧ ಚಿತ್ರಕಲಾವಿದ ರಾಜಾರವಿವರ್ಮನ ಚಿತ್ರ ಗ್ಯಾಲರಿ, ಭೂತದೈವಗಳ ಊರುಗಳಿರುವ ನಂದಿಕೇಶ್ವರ ದೇವಸ್ಥಾನ, ಅದಮಾರು ಸಮೀಪದ ಶಿವಳ್ಳಿ ಬ್ರಾಹ್ಮಣರ ಕುಂಜೂರು ಚೌಕಿ ಮನೆ, ಜಂಗಮ ಮಠದ ಮನೆ, ಕೊಡಗಿನ ಹರಿಹರ ಮಂದಿರ, ಮಿಯಾರು ಮನೆ ಮುಂತಾದ ಹಲವಾರು ರಾಜವಂಶಕ್ಕೆ ಸೇರಿದ, ಕಲಾತ್ಮಕ ಕೆತ್ತನೆಗಳಿಂದ ಕೂಡಿದ ಮನೆ, ಕಟ್ಟಡಗಳು ಇಲ್ಲಿರುವುದು ಒಂದು ಅದ್ಭುತವೇ ಸರಿ.

ಇದರ ರೂವಾರಿ ವಿಜಯನಾಥ ಶೆಣೈಯವರು ಪಾರಂಪರಿಕ ಕಲಾ ಪ್ರಕಾರದ ಕುರಿತು ಅಪಾರ ಆಸಕ್ತಿ ಹೊಂದಿದವರು. ಅವರೊಬ್ಬ ಬ್ಯಾಂಕ್ ಉದ್ಯೋಗಿಯಾಗಿದ್ದರು. ಅವರು ರಜಾ ದಿನಗಳಲ್ಲಿ ದೇಶದಾದ್ಯಂತವಾಗಿ ಸುತ್ತಾಡಿ ಪ್ರಾಚೀನ ವಸ್ತುಗಳನ್ನು ಸಂಗ್ರಹಿಸಿ ಮುಂದಿನ ತಲೆಮಾರಿಗೆ ಅದರ ಮಹತ್ವವನ್ನು ತಿಳಿಸುವ ಉದ್ದೇಶವನ್ನಿಟ್ಟು

ಕೆಲವೊಂದು ಪ್ರಮುಖವಾದವುಗಳು- ಚಿನ್ನಾಭರಣ ಇಡುತ್ತಿದ್ದ ಕೆತ್ತನೆಯ ಪೆಟ್ಟಿಗೆಗಳು, ಹಳೆ ಕಾಲದ ವಿಶಿಷ್ಟ ಶೈಲಿಯ ಆಭರಣಗಳು, ಕಾಲು ದೀಪಗಳು, ತೂಗು ದೀಪ, ಆರತಿಗಳು, ಕಲ್ಲಿನ ವಿಗ್ರಹಗಳು, ಮಣ್ಣಿನ ವಿವಿಧ ತರದ ಮಡಿಕೆಗಳು, ಪಾತ್ರೆಗಳು, ಚೆನ್ನೆಮಣೆ, ವಾಸ್ತುಶಿಲ್ಪಗಳು, ಕಾಷ್ಠಶಿಲ್ಪಗಳು, ಕರಕುಶಲ ವಸ್ತುಗಳು, ತಾಮ್ರ, ಹಿತ್ತಾಳೆ, ಅಲ್ಯೂಮಿನಿಯಂ ಮುಂತಾದ ಲೋಹಗಳ ಮನೆಯ ಸಾಮಗ್ರಿಗಳು ಈ ಎಲ್ಲಾ ಹೆಚ್ಚಿನ ವಸ್ತುಗಳು ಕರಾವಳಿ ಮತ್ತು ಮಲೆನಾಡಿನ ಜನರ ಮನೆಗಳಲ್ಲಿ ಹಾಗೂ ದೇವಸ್ಥಾನಗಳಲ್ಲಿ ಹಿಂದಿನ ಕಾಲದಲ್ಲಿ ಬಳಕೆಯಾಗುತ್ತಿದ್ದ ವಸ್ತುಗಳಾಗಿವೆ. ಈ ಒಂದು ಅದ್ಭುತ ಪ್ರವಾಸಿ ತಾಣಕ್ಕೆ ಬಂದಂತಹ ನಮ್ಮ ವಿದ್ಯಾರ್ಥಿಗಳು ಬಹಳ ಸಂತೋಷ ದಿಂದ ಮೆಚ್ಚುಗೆಯ ಅಭಿಪ್ರಾಯ ವ್ಯಕ್ತಪಡಿಸಿರುವುದು ಎಲ್ಲರಿಗೂ ಪ್ರವಾಸವು ಸಾರ್ಥಕವೆನಿಸಿತು. ಪ್ರಜ್ಞಾವಂತ ಕಲಾ ಆಸಕ್ತರು, ವಿದ್ಯಾರ್ಥಿಗಳು ಒಮ್ಮೆಯಾದರೂ ಭೇಟಿ ನೀಡಿ ಇಲ್ಲಿನ ವೈಶಿಷ್ಟ್ಯಗಳನ್ನು ತಿಳಿಯುವ ಜತೆಗೆ, ಆಧುನಿಕ ಕಾಲಘಟ್ಟದಲ್ಲಿ

Bangra

## LITTLE KITES  8 th Std




60 G h s s Bangramanjeshwar

# LITTLE KITES 9 th Std



**Bangra**

## LITTLE KITES 10 th Std

